ಸಹಜಾಂ ಶಾಸ್ತ್ರ ಸಮೇತ
ಮೂವತ್ತೆರಡು ಶಾಸ್ತ್ರವಿದ್ಯೆಗಳನ್ನು
ಬೋಧಿಸುವ ವಿದ್ಯಾ ಮಕುಟವಿದು

ಪ್ರತ್ಯಕ್ಷ

ಚಮತ್ಕಾರ ಚಂದ್ರಿಕೆ

ಲೇಖಕರು,

(ಕೈ.ವಾ.) ಟಿ.ಹೆಚ್.ಎಂ. ಸಿದ್ಧಾಂತಿ ವಿರೂಪಾಕ್ಷ ಶಾಸ್ತ್ರಿಗಳು
(ಭಿಷಗ್ಮಣಿ ಔಷಧಾಲಯ, ಹರಪನಹಳ್ಳಿ)

ಪ್ರಕಾಶಕರು

ಡಾ।। ಟಿ.ಹೆಚ್.ಎಂ. ಜಗದೀಶ್
ಸಹಾಯಕ ಸರ್ಜನ್ (ನಿವೃತ್ತ) ಬೆಂಗಳೂರು.

ಮಂತ್ರ ಶಾಸ್ತ್ರವು

ಒಂದಾನೊಂದು ದಿವಸ ಕೈಲಾಸ ಶಿಖರದಲ್ಲಿ ಶ್ರೀ ಪರಶಿವನು ಗೌರಿದೇವಿ ಯೊಂದಿಗೆ ಓಲಗದಲ್ಲಿ ಸುಖಾಸೀನನಾಗಿ ವಿನೋದದಿಂದಿರಲು ಶ್ರೀ ಗೌರಿದೇವಿಯು ಪಶುಪತಿಯಾದ ಶ್ರೀ ಶಂಕರನನ್ನು ಕುರಿತು ಹೇ ದೇವದೇವಾ ! ಮಂತ್ರ ಶಾಸ್ತ್ರ ವಿಚಾರವನ್ನೂ ಮತ್ತು ಅದರ ಫಲಮಹಿಮೆಯನ್ನೂ ದಯಮಾಡಿ ಅಪ್ಪಣೆ ಕೊಡಿಸ

ಬೇಕೆಂಬದಾಗಿ ಪ್ರಾರ್ಥಿಸಲಾಗಿ ಶ್ರೀ ಪರಶಿವನು ಗೌರಿದೇವಿಯ ಪ್ರಾರ್ಥನೆಯನ್ನು ಅಂಗೀಕರಿಸಿ ಹೇ ದೇವಿ! ಅತ್ಯಂತ ಗಹನವೂ, ಆಗಾಧವೂ ಅಮೂಲ್ಯವೂ ಆದ ಪ್ರಶ್ನೆಯನ್ನು ಪೃಚ್ಛಿಸಿರುತ್ತೀ. ಆದಾಗ್ಯೂ ಸಾವಧಾನದಿಂದ ಕೇಳುವಂಥಾವಳಾಗು ಹೇಳುತ್ತೇನೆ. ಪ್ರಪಂಚದಲ್ಲಿ ಜರಾಯುಜಾಂಡಜೋದ್ಭಿಜ್ಜಗಳೆಂಬ ಚತುರ್ವಿಧ ಪ್ರಾಣಿವರ್ಗಗಳಲ್ಲಿ ಮಾನವ ವರ್ಗವೇ ಸರ್ವೋತ್ಕೃಷ್ಟವಾದುದು. ಇಂಥಾ ಮನುಷ್ಯ ಜನ್ಮದಲ್ಲಿ ಮಾನವರು ಸಂಸಾರ ತಾಪತ್ರಯಕ್ಕೆ ಸಿಲುಕಿ, ಪೂರ್ವಜನ್ಮ ಕರ್ಮಾಂತರದಿಂದಲೂ. ಗ್ರಹಚಾರ ದೋಷದಿಂದಲೂ, ಮಾತಾಪಿತೃ ಭ್ರಾತೃ, ಸ್ತ್ರೀ ಪುತ್ರ, ಆಪ್ತ, ಮಿತ್ರ, ಬಂಧುಗಳು, ಸೇವಕರು ಮುಂತಾದವರುಗಳಿಂದಲೂ ಮತ್ತು ಉದ್ಯೋಗ, ವ್ಯಾಪಾರ, ವ್ಯವಹಾರ, ವಿದ್ಯಾ, ಭೂಮಿ, ವ್ಯವಸಾಯ ಮುಂತಾದವುಗಳಿಂದ ಕಷ್ಟನಷ್ಟಗಳನ್ನು ಹೊಂದುತ್ತಲೂ, ವ್ಯಸನ, ಶತೃತ್ವ, ರಾಜಾಗ್ನಿ ಚೋರಭಯ, ರೋಗಪೀಡೆ, ಭೂತ—ಪ್ರೇತ—ಪಿಶಾಚ-ಶಾಕಿನಿ-ಡಾಕಿನಿ ಭೇತಾಳ ಮುಂತಾದ ಕ್ರೂರ ಗ್ರಹಪೀಡೆಯಿಂದಲೂ ಅನೇಕ ಭಯಾನಕವಾದ ಸಂಕಟಗಳಿಗೆ ತುತ್ತಾಗಿ, ಚತುರ್ವಿದ ಪುರುಷಾರ್ಥ ಫಲವನ್ನು ಹೊಂದದೆ ಬಳಲುತ್ತಿರುವರು. ಇದಕ್ಕೆ ಆಯಾಯ ವಿಷಯಗಳಿಗೆ ಹೇಳಲ್ಪಟ್ಟಿರುವ ಮಂತ್ರ, ತಂತ್ರ ಯಂತ್ರಗಳನ್ನು ಸಿದ್ಧಿಮಾಡಿಕೊಂಡು ಶ್ರದ್ಧಾ ಭಕ್ತಿ ನಂಬಿಕೆಗಳಿಂದ ಆಚರಿಸಲು ಮೇಲ್ಕಂಡ ವಿಪತ್ತುಗಳೆಲ್ಲವೂ ಬಯಲಾಗುವುವು ಮತ್ತು ಅಂಥಾವರು ಇಹಲೋಕದಲ್ಲಿ ಸುಖೋಪಭೋಗಗಳನ್ನನುಭವಿಸಿ ಪರಲೋಕದಲ್ಲಿ ಶಾಶ್ವತವಾದ ಮುಕ್ತಿಪದವನ್ನು ಪಡೆಯುವವರು. ನನ್ನ ಛಾಯೆಯೇ ಮಂತ್ರರೂಪವಾಗಿರುವುದು. ಈ ಮಂತ್ರ ರೂಪವಾಗಿರುವ ನನ್ನನ್ನು ಯಾರು ಶ್ರದ್ಧಾ ಭಕ್ತಿ ನಂಬಿಕೆಗಳಿಂದ ಭಜಿಸುವರೋ ಅವರಿಗೆ ಅಣಿಮಾದ್ಯಷ್ಟ ಸಿದ್ಧಿಗಳು ಸಿದ್ಧಿಸಿ ಸುಖಪಡುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ, ಈ ಮಂತ್ರ ಶಾಸ್ತ್ರವು ಚತುರ್ವೇದಗಳಲ್ಲೊಂದಾದ ಅಥರ್ವಣ ವೇದದಲ್ಲಿ ಸವಿಸ್ತಾರವಾಗಿ ಹೇಳಲ್ಪಟ್ಟಿರುವುದೆಂದು ಶ್ರೀ ಪರಶಿವನು ಶ್ರೀ ಗೌರಿದೇವಿಗೆ ಶೃತಪಡಿಸಿದನು. ಅದನ್ನ ವಸಿಷ್ಠ ಮಹರ್ಷಿಗಳು ಅಗ್ನಿದೇವರಿಗೆ ನಿರೂಪಿಸಿದ ಈ ಮಂತ್ರ [ಶಾಸ್ತ್ರವನ್ನು ಅಥರ್ವಣ ವೇದದೋಳ್ ಮಂತ್ರಸಾರ, ಮಂತ್ರರತ್ನಾಕರ, ಮಂತ್ರ ಚಿಂತಾಮಣಿ ಮುಂತಾದ ಅನೇಕ ಗ್ರಂಥಗಳನ್ನು ಪರಿಶೋಧಿಸಿ ಮುಖ್ಯವಾದುವುಗಳನ್ನು ಮಾತ್ರ ಸಂಗ್ರಹಿಸಿ ಇಲ್ಲಿ ಉಲ್ಲೇಖಿಸಿರುತ್ತೇವೆ.

ಸಮಸ್ತ ಯಂತ್ರ ಮಂತ್ರಾದಿಗಳನ್ನು ಸಿದ್ಧಿಮಾಡಿಕೊಳ್ಳುವ ಕ್ರಮ

ಶ್ಲೋ॥ ಸ್ನಾನಂ ಕೃತ್ವಾ ಶುಚಿರ್ಭೂತ್ವಾ ಪೂಜಯೇತ್ಕುಲದೇವತಾಂ।
ಲೇಖನೀಯಂ ಪ್ರಯತ್ನೇ ನಚ್ಛೈಕಾಂತೇಯಂತ್ರ ಮುತ್ತಮಂ॥

ತಾತ್ಪರ್ಯ:—ಯಂತ್ರ ಮಂತ್ರವನ್ನನುಷ್ಠಾನ ಮಾಡುವವರು ಯಾರಾಗಲಿ ಸ್ನಾನವಂ ಮಾಡಿ ಶುಚಿರ್ಭೂತರಾಗಿ ತನ್ನ ಇಷ್ಟದೇವತಾ ಪೂಜೆಯನ್ನು ಮಾಡಿಕೊಂಡು ಏಕಾಂತ ಸ್ಥಳದಲ್ಲಿ ರಹಸ್ಯವಾಗಿ ಯಂತ್ರವನ್ನು ಬರೆಯಬೇಕು.

ಶ್ಲೋ॥ ವಿಧಿರೇಷ ಪ್ರಸಿದ್ಧೋಸ್ತಿಯಂ ತ್ರಾಣಾಂ ಭೂತಲೇ ಕಲೌ
ಮಂತ್ರತೋಽಪ್ಯೇತು ಪಶ್ಯಂತಿ ಸಿದ್ಧ ಸಾಧ್ಯಾದಿ ಸಾಧಕಾಂ॥

ತಾತ್ಪರ್ಯ —ಯಾವ ಮಂತ್ರ, ಯಂತ್ರಾದಿಗಳು ಯಾರು ಯಾರಿಗೆ ಸಿದ್ಧಿಯಾಗುವುದೋ ಆ ವಿಷಯವನ್ನು ಈ ಕೆಳಗೆ ಬರೆದಿರುವ ಮಂತ್ರಕೋಷ್ಠದಲ್ಲಿ ಹೇಳಿರುವ ಪ್ರಕಾರ ನೋಡಿಕೊಂಡು ಆಚರಿಸಬೇಕು.

ಸಿದ್ಧ ಸಾಧ್ಯಾದಿ ಮಂತ್ರ ಯಂತ್ರಕೋಷ್ಠ ಕ್ರಮ

ಶ್ಲೋ॥ ನವೈಕ ಪಂಚಮೇ ಸಿದ್ಧ ಸ್ಸಾಧ್ಯಷಡ್ದ ಶಯುಗ್ಮಕೇ।
ತ್ರಿಸಪ್ತ ರುದ್ರೇಸು ಸಿದ್ಧೋ ವೇದಾಷ್ಟದ್ವಾದಶೇ ರೀಪು॥

ತಾತ್ಪರ್ಯ:—ನಾವು ನಕ್ಷತ್ರಗಳ ಪ್ರಕಾರ ೧೨ ಮನೆಗಳುಳ್ಳ ನವಗ್ರಹ ಚಕ್ರವನ್ನು ಬರೆದು ಅದರಲ್ಲಿ ಸಾಧಕನ ನಾಮಾದ್ಯಕ್ಷರದಿಂದ ಯಾವ ರಾಶಿಯಾಗುತ್ತದೆಯೋ ಆ ರಾಶಿಯನ್ನೂ ಮತ್ತು ಮಂತ್ರ ಯಂತ್ರ ನಾಮಾದ್ಯಕ್ಷರದಿಂದ ಯಾವ ರಾಶಿಯಾಗುತ್ತದೆಯೋ ಆ ರಾಶಿಯನ್ನು ತಿಳಿದುಕೊಂಡು ಸಾಧಕನ (ತನ್ನ) ರಾಶಿಗೆ ಮಂತ್ರ ಯಂತ್ರ ರಾಶಿ ೯-೧-೫ ಈ ರಾಶಿಗಳೊಳಗೆ ಯಾವ ರಾಶಿಯಾಗುತ್ತದೆಯೋ ಅದು ಸಿದ್ಧವೆಂತಲೂ, ೬-೧೦-೨ ಈ ರಾಶಿಗಳೊಳಗೆ ಯಾವ ರಾಶಿಯಾಗುತ್ತದೆಯೋ ಅದು ಸಾಧ್ಯವೆಂತಲೂ, ೩-೭-೧೧ ಈ ರಾಶಿಗಳೊಳಗೆ ಯಾವ ರಾಶಿಯಾಗುತ್ತದೆಯೋ ಅದು ಸುಸಿದ್ಧವೆಂತಲೂ, ೪-೮-೧೨ ಈ ರಾಶಿಗಳೊಳಗೆ ಯಾವ ರಾಶಿಯಾಗುತ್ತದೆಯೋ ಅದು ಅರಿಯೆಂತಲೂ ತಿಳಿಯತಕ್ಕದು.

ಸಿದ್ಧ ಸಾಧ್ಯಾದಿಗಳ ಫಲವು

ಶ್ಲೋ॥ ಸಿದ್ಧ ಸಾಧ್ಯಾವರಿಶ್ಚೇತಿ ಸುಸಿದ್ಧ ಸ್ತು ತಥಾ ಪರಃ।
ಸಿದ್ಧಸ್ಸಿದ್ಧ್ಯತಿ ಕಾಲೇನ ಸಾಧ್ಯಸಿದ್ಧ ತಿವಾನವ।
ಮೂಲಂ ಕೃಂತ ತ್ಯರಿಸ್ತತ್ರ ಸುಸಿದ್ಧ ಸ್ತತ್ಕ್ಷಣಾರ್ಥದಃ॥

ತಾತ್ಪರ್ಯ:—ಸಿದ್ಧ ಸಾಧ್ಯ ಸುಖಸಿದ್ಧಾರಿ ಮಂತ್ರಗಳು ನಾಲ್ಕರಲ್ಲಿ ಸಿದ್ಧಮಂತ್ರದಿಂದ ಕಾಲಕ್ರಮವಾಗಿ ಕಾರ್ಯವು ಆಗುವುದು. ಸಾಧ್ಯ ಮಂತ್ರವು ಸಂದೇಹ ಫಲವುಳ್ಳದು. ಅರಿ ಮಂತ್ರವು ತನಗೆ ಹಾನಿಯನ್ನುಂಟುಮಾಡುವುದು. ಸುಸಿದ್ಧ ಮಂತ್ರವು ತತ್‌ಕ್ಷಣದಲ್ಲಿಯೇ ಫಲವನ್ನು ಕೊಡುವುದೆಂದು ತಿಳಿಯಬೇಕು.

ಉದಾರಣೆ:—ಯಂತ್ರವನ್ನು ಧರಿಸತಕ್ಕವನ ಹೆಸರು ಹಾಲಪ್ಪ ಹಾ ಎಂಬ ಅಕ್ಷರಕ್ಕೆ 'ಕೇಕೋಹಾಹಿ' ಪುನರ್ವಸು ಎಂಬ ಪ್ರಕಾರ ಪುನರ್ವಸು ನಕ್ಷತ್ರ ೩ನೆಯ ಪಾದಕ್ಕೆ ಮಿಥುನ ರಾಶಿಯಾಗುತ್ತದೆ. ಈ ರಾಶಿಯೇ ಯಂತ್ರವನ್ನು ಧರಿಸತಕ್ಕವನ ರಾಶಿ. ಯಂತ್ರರಾಶಿ ಎಂದರೆ 'ಜನವಶೀಕರ ಯಂತ್ರಂ' ಇಲ್ಲಿ 'ಜ' ಎಂಬ ಅಕ್ಷರಕ್ಕೆ 'ಬೇ ಬೋ ಜಾ ಜೀ' ಉತ್ತರಾಷಾಢ, ಎಂಬ ಪ್ರಕಾರ ಉತ್ತರಾಷಾಡ ನಕ್ಷತ್ರದ ೩ ನೆಯ ಪಾದಕ್ಕೆ ಮಕರ ರಾಶಿಯಾಗುತ್ತದೆ. ಈ ರಾಶಿಯೇ

ಯಂತ್ರರಾಶಿಯಾಗುವುದು. ಆದಕಾರಣ ಯಂತ್ರ ಧರಿಸುವವನ ರಾಶಿಯಾದ ಮಿಥುನ ರಾಶಿಗೆ ಯಂತ್ರ ರಾಶಿಯಾದ ಮಕರರಾಶಿ ೮ ನೆಯ ರಾಶಿಯಾಗುವುದರಿಂದ ಈ ಯಂತ್ರವು ಸುಸಿದ್ಧ ಯಂತ್ರವೆಂತಲೂ ತತ್‌ಕ್ಷಣವೇ ಫಲವನ್ನು ಕೊಡುವುದೆಂತಲೂ ತಿಳಿಯಬೇಕು. ಇದೇ ಪ್ರಕಾರ ಮಂತ್ರಕ್ಕೂ ನೋಡಿಕೊಳ್ಳಬೇಕು. ಹಾಗೆ ತಮಗೆ ಬೇಕಾದ ಮಂತ್ರ ಯಂತ್ರಗಳನ್ನು ಸಾಧಕನ ರಾಶಿಯಿಂದ ನೋಡಿಕೊಂಡು ಬರೆಯಬೇಕು.

ಮತ್ತೊಂದು ವಿಧ ಮಂತ್ರಸಿದ್ಧಿ ಮಾಡುವ ಕ್ರಮ

ಶ್ಲೋ॥ ಜಲಾವಾಸಂಗತ್ವಾ ಗ್ರಹಣ ಸಮಯೇ ಪೂರ್ಣಕಲಶಂ ।
ಜಲೇನಾ ಪೂರ್ಯೈ ತತ್ಕುಸುಮ ಪರಿಪೂಜಾಂನ್ಯತನುಯಾತ್ ॥
ತತಸ್ತ್ವಾನಿಕ್ರಿತ್ವಾ ಪಯಸಿಜ ಮಷ್ಟೋತ್ತರಶತಂ ।
ಪಠಕ್ಷೋಽಸಿಂ ಚೇತ್ತತ್ಕಲಶಪಯಸಾ ಕೋಮಲತರುಃ ।
ಏವಂ ಮಂತ್ರವಿಶುದ್ಧಿಂ ಯಃಕುರುತೇ ಸಾಧಕೋ ಭುವಿ ।
ನಿಯಮಾತ್ಕೃತಿ ಪರ್ಯಂತು ಕಾರ್ಯಮೇತದ್ವಿಧಾನತಃ ॥

ತಾತ್ಪರ್ಯ:— ಯಾರಾದರೂ ಮಂತ್ರವನ್ನು ಬಾಯಿಗೆ ಕಲಿತುಕೊಂಡು ಗ್ರಹಣಕಾಲದಲ್ಲಿ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು ಕೆರೆಗಾಗಲಿ, ಭಾವಿಗಾಗಲಿ, ಹೊಳೆಗಾಗಲಿ ಹೋಗಿ ಸ್ನಾನವಂ ಮಾಡಿಕೊಂಡು ಒಂದು ತಂಬಿಗೆಯನ್ನು ಬೇಗ ನೀರನ್ನು ತುಂಬಿ ಪೂರ್ವದಿಕ್ಕಿನಲ್ಲಿಟ್ಟು ತನ್ನ ಕುಲದೇವರನ್ನು ಪೂಜಿಸಿ ಸ್ವಲ್ಪ ನೀರಿನಲ್ಲಿಳಿದು ಪೂರ್ವಕ್ಕೆ ಮುಖಮಾಡಿ ನಿಂತುಕೊಂಡು ದೇವರನ್ನು ಧ್ಯಾನಿಸಿ ೧೦೮ ಸಾರೆ ಮಂತ್ರವನ್ನು ಜಪಿಸಬೇಕು. ಜಪಿಸುವಾಗ ಪ್ರತಿಯೊಂದು ಸಾರೆಗೂ ಯಾವುದಾದರೊಂದು ಕೆಂಪು ಪುಷ್ಪವನ್ನು ನೀರಿನಲ್ಲಿ ಹಾಕುತ್ತಿರಬೇಕು. ಈ ರೀತಿಯಾಗಿ ಮಂತ್ರವನ್ನು ಜಪಿಸಿದನಂತರ ತುಂಬಿದ ತಂಬಿಗೆಯನ್ನು ಮನೆಗೆ ತೆಗೆದುಕೊಂಡು ಬಂದು ದೇವಗೃಹದಲ್ಲಿಟ್ಟು, ಮರುದಿವಸ ಆ ನೀರನ್ನು ತೆಗೆದುಕೊಂಡು ಹೋಗಿ ಹಸುರು ಗಿಡಕ್ಕೆ ಹಾಕಬೇಕು. ಮಂತ್ರ ಸಿದ್ಧಿಮಾಡಿಕೊಂಡ ನಂತರ ಬಹಿಷ್ಠೆಯಾದ ಸ್ತ್ರೀಯರ ಸಂಗಡ ಮಾತನಾಡಬಾರದು. ಅವರ ನೆರಳು ತನ್ನ ಮೇಲೆ ಬೀಳಬಾರದು. ಅಶೌಚ (ಮೈಲಿಗೆ) ದೇವರ ಮನೆಯಲ್ಲಿ ಭೋಜನಮಾಡಬಾರದು. ಚೌರ್ಯ, ಅಸತ್ಯ, ಸುಳ್ಳು ಸಾಕ್ಷಿ ಇವನ್ನು ಆಚರಿಸಬಾರದು. ಸಾಧ್ಯವಾದ ಮಟ್ಟಿಗೆ ಶೌಚಾಚಾರ ಸತ್ಯಸಂಧನಾಗಿರಬೇಕು. ಹೀಗೆಯೇ ಪ್ರತಿ ಗ್ರಹಣ ಕಾಲದಲ್ಲಿಯೂ ಮಂತ್ರಸಿದ್ಧಿಯನ್ನು ಮಾಡಿಕೊಳ್ಳಬೇಕು. ಭಾನುವಾರ, ಗುರುವಾರ, ಅಮಾವಾಸ್ಯೆ ಇದ್ದ ದಿವಸವೂ ಮಂತ್ರಸಿದ್ಧಿಯನ್ನು ಮಾಡಿಕೊಳ್ಳಬಹುದು. ಈ ರೀತಿಯಾಗಿ ಮಂತ್ರಸಿದ್ಧಿಯನ್ನು ಮಾಡಿಕೊಂಡು ಏಕಾಂತ ಸ್ಥಳದಲ್ಲಿ ರಹಸ್ಯವಾಗಿ ಯಂತ್ರವನ್ನು ಬರೆದು ಪೂಜಿಸಿ ಮಂತ್ರದಿಂದ ಮಂತ್ರಿಸಿ ಉಪಯೋಗಿಸಿದರೆ ಫಲಸಿದ್ಧಿಯಾಗುವುದೆಂದು ಮಹರ್ಷಿಯರ ತಾತ್ಪರ್ಯವು.

ಸರ್ವ ಯಂತ್ರಗಳಿಗೂ ಪ್ರಾಣಪ್ರತಿಷ್ಠಾ ಮಂತ್ರ

ಮಂತ್ರ॥ ರಕ್ತಾಂಭೋದಿಸ್ತಪೋತೋಲ್ಲ ಸದರುಣ ಸರೋಜಾಧಿ ರೂಢಾಕರಾಬ್ಜೈಃ । ಪಾಶಂಕೋ ದಂಡಮಿಕ್ಷೂದ್ಭವಮಣಿ ಗುಣಮಪ್ಯಂ ಕುಶಂ ಪಂಚಬಾಣಾನ್ । ಬಿಭ್ರಾಣಾಶ್ರುತ್ ಕಪಾಲಂ । ತ್ರಿನಯನ ವಿಲಸತ್ಪೀನವಕ್ಷೋರುಹಾಢ್ಯ ದೇವೀ ಬಾಲಾರ್ಕ ವರ್ಣಾಭವತು ಸುಖಕರೀ ಪ್ರಾಣಶಕ್ತಿಃ ಪರಾನ್ನಃ ॥

ಬೀಜಮಂತ್ರ॥ ಓಂ ನಮಃ ಶಿವಾಯ । ಭೂತನಾದ ವಿಗ್ರಹಾಯ । ಸಕಲಾಭಿಷ್ಟಪ್ರದಂ । ಓಂ ಸ್ವಾಹಾ ಓಂ ಗೌರೀ ಕುಮಾರಾಯ ಸ್ವಾಹಾ ॥

ಈ ಯಂತ್ರವನ್ನು ಧರಿಸುವ ಕಾಲದಲ್ಲಿ ಸದರಿ ಯಂತ್ರವನ್ನು ಅಷ್ಟವಿಧಾರ್ಚನೆಯಿಂದ ಪೂಜಿಸಿ ಮೇಲಿನ ಮಂತ್ರದಿಂದ ೯ ಸಾರೆ ಮಂತ್ರಿಸುವುದರ ಮೂಲಕ ಪ್ರಾಣಪ್ರತಿಷ್ಠೆ ಮಾಡಿ ಯಂತ್ರವನ್ನು ಧರಿಸಿಕೊಳ್ಳತಕ್ಕದು.

ಅಥ ದತ್ತಾತ್ರೇಯ ತಂತ್ರೇ ಪಾರ್ವತೀಶ್ವರ ಸಂವಾದೆ ಮಂತ್ರಯೋಗಃ

ಅಥ ವಿಘ್ನೇಶ್ವರ ಮಂತ್ರ

ಯಾರಾದರೂ ಅಸಾಧ್ಯವಾದ ಕೆಲಸ ಕಾರ್ಯಗಳನ್ನುಪಕ್ರಮಿಸಬೇಕಾದ ಕಾಲದಲ್ಲಿ ಒಂದು ಶುಭ ದಿವಸ ಶುಭ ಮುಹೂರ್ತದಲ್ಲಿ ಮನೆಯಲ್ಲಿ ನೆಲಸಾರಣೆ ಮಾಡಿ ರಂಗವಲ್ಲಿಯನ್ನು ಬರೆದು ಸ್ನಾನ ಸಂಧ್ಯಾವಂದನಾದಿ ಜಪತಪಾನುಷ್ಠಾನಗಳನ್ನು ತೀರಿಸಿಕೊಂಡು ಒಂದು ಬೆಳ್ಳಿಯ ತಗಡಿನಲ್ಲಾಗಲಿ ಭಂಗಾರದ ತಗಡಿನಲ್ಲಾಗಲಿ ಒಂದು ಚಿಕ್ಕ ವಿಘ್ನೇಶ್ವರ ಮೂರ್ತಿಯನ್ನು ಬರೆದು, ಅದರಲ್ಲಿ ಈ ಕೆಳಗೆ ಬರೆದಿರುವ ಮೂಲಮಂತ್ರದ ಪ್ರಣವಾಕ್ಷರಗಳನ್ನೂ, ಮತ್ತು ಯಾವ ಕಾರ್ಯದ ಉದ್ದೇಶದಿಂದ ಈ ಮಂತ್ರವನ್ನು ಅನುಷ್ಟಿಸುತ್ತಿರುವುದೋ ಆ ಕಾರ್ಯದ ಹೆಸರನ್ನೂ ಬರೆದು ದೇವರ ಜಗುಲಿಯ ಮೇಲಿಟ್ಟು ಅಷ್ಟವಿಧಾರ್ಚನೆಯಿಂದ ಪೂಜಿಸಿ ಮಂತ್ರವನ್ನು ೯ ವೇಳೆ ಜಪಿಸಬೇಕು ತದನಂತರದಲ್ಲಿ ಆ ತಗಡನ್ನು ಸುರಳಿಸುತ್ತಿ ರೇಷ್ಮೆಯ ದಾರದಿಂದ ಬಿಗಿದು ಒಂದು ತಾಯತದಲ್ಲಿ ಹಾಕಿ ಭದ್ರಪಡಿಸಿ ದೇಹದಲ್ಲಿ ಧರಿಸಿಕೊಳ್ಳಬೇಕು. ಮತ್ತು ಆ ದಿವಸ ತನ್ನ ಯೋಗ್ಯತಾನುಸಾರವಾಗಿ ಅನ್ನ ಸಂತರ್ಪಣೆಯನ್ನು ಮಾಡಿ ಕಾರ್ಯವನ್ನು ಸಾಧಿಸಿದರೆ ಆ ಕಾರ್ಯವು ಶೀಘ್ರದಲ್ಲಿಯೇ ಕೈಗೂಡುವುದು. ಈ ಮಹಾ ಮಂತ್ರವನ್ನು ಬರದಿರುವ ತಗಡನ್ನು ಯಾರು ತಮ್ಮ ಮನೆಯಲ್ಲಿಟ್ಟು ಶ್ರದ್ಧಾಭಕ್ತಿಗಳಿಂದರ್ಚಿಸಿ ಭಜಿಸುವರೋ ಅವರಿಗೆ ಸರ್ವ ವಿಧದಿಂದಲೂ ಸುಖವುಂಟಾಗುವುದು. ಯಾರು ಈ ಮಹಾ ಮಂತ್ರವನ್ನು ಅಲಕ್ಷ್ಯದಿಂದ ಕಾಣುವರೋ ಅವರಿಗೆ ವಿಪರೀತ ಫಲವುಂಟಾಗುವುದರಲ್ಲಿ ಸಂಶಯವಿಲ್ಲ.

ಶ್ರೀ ವಿಘ್ನೇಶ್ವರ ಯಂತ್ರ

ಓಂ	ಶ್ರೀಂ
ಹ್ರೀಂ	ಕ್ರೀಂ
ಗ್ಲಾಂ	ಗ್ಲಾಂ

ಮಂತ್ರ:—ಅಸ್ಯ ಶ್ರೀ ವಿಘ್ನೇಶ್ವರ ಮಹಾ। ಮಂತ್ರಸ್ಯ। ಶಂಕರಋಷಿಃ॥ ಅನುಷ್ಟುಪ್‌ಛಂದಃ। ಆಶುದ್ಧಿ ಗಣಾಧಿಪೋ ದೇವತಾ। ಗಂ। ಭೀಜಂ। ಸ್ವಾಹಾಯ। ಶಕ್ತಿಃ॥ ಮಮ ಸಕಲ ಮನೋಸಿದ್ಧಾರ್ಥೆ ಜಪೆ ವಿನಿಯೋಗಃ। ಗಾಂ। ಅಂಗುಷ್ಠಾಭ್ಯಾಂ ನಮಃ। ಗೀಂ। ತರ್ಜನೀಭ್ಯಾಂ ನಮಃ। ಗೂಂ। ಮಧ್ಯಮಾಭ್ಯಾಂ ನಮಃ। ಗೋಂ। ಅನಾಮಿಕಾಭ್ಯಾಂ ನಮಃ। ಗೌಂ। ಕನಿಷ್ಠಿಕಾಭ್ಯಾಂ ನಮಃ। ಗಃ ಕರತಳಕರ ಪೃಷ್ಠಾಭ್ಯಾಂ ನಮಃ। ಏವಂ ಹೃದಯ। ನ್ಯಾಸಂ। ಧ್ಯಾನಂ ಸೂರ್ಯಕೋಟಿ ಪ್ರಕಾಶಂ। ಸುಪ್ರಸನ್ನಂ। ದ್ವಿಪಾನನಂ। ಜ್ಞಾನಯೋಗ ಪ್ರದಂತಾಂತು। ಗಣೇಶಂ ವರದಾನಮಃ॥

ಮೂಲಮಂತ್ರ:—ಓಂ। ಶ್ರೀಂ। ಹ್ರೀಂ। ಕ್ಲೀಂ। ಗ್ಲಾಂ। ಗ್ಲೌಂ। ಗಣಾಧೀಪತಯೇ। ಶತೃ ಭೂತನಿವಾರಣೀಯ। ಸರ್ವಕಾರ್ಯ ಸಿದ್ಧಿ ಸ್ವಾಹಾ॥ ಮೇಲ್ಕಂಡ ಮೂಲ ಮಂತ್ರದ ಪ್ರಣವಾಕ್ಷರಗಳನ್ನು ಬರೆದು ದೇಹದಲ್ಲಿ ಧರಿಸಿಕೊಂಡ ಯಂತ್ರವನ್ನು ಕಾರ್ಯ ಸಿದ್ಧಿಸಿದ ತರುವಾಯ ತೆಗೆದು ಮನೆಯಲ್ಲಿ ಒಂದು ಕಡೆಗೆ ಬಿಚ್ಚಿ ಇಡಬೇಕು.

ಸರಸ್ವತಿ ಮಂತ್ರ

ವಿದ್ಯಾಭ್ಯಾಸವನ್ನು ಪ್ರಾರಂಭಿಸತಕ್ಕವರೂ, ದೊಡ್ಡ ದೊಡ್ಡ ಪಟ್ಟ ಪರೀಕ್ಷೆಗಳಿಗೆ ಅಭ್ಯಾಸಮಾಡತಕ್ಕವರೂ, ಶಾರದಾನುಗ್ರಹಕ್ಕೆ ಪಾತ್ರರಾಗಬೇಕೆಂಬ ಇಷ್ಟವುಳ್ಳವರೂ ಒಂದು ಶುಭ ದಿವಸ ಶುಭ ಮುಹೂರ್ತದಲ್ಲಿ ಮನೆಯಲ್ಲಿ ನೆಲಸಾರಣೆಯನ್ನು ಮಾಡಿ, ರಂಗವಲ್ಲಿಯನ್ನಿಟ್ಟು ಸ್ನಾನ ಸಂಧ್ಯಾವಂದನಾದಿಳಿಗಳಿಂದ ಶುಚಿರ್ಭೂತನಾಗಿ ಒಂದು ಬೆಳ್ಳಿಯ ತಗಡಿನಲ್ಲಾಗಲಿ, ಭಂಗಾರದ ತಗಡಿನಲ್ಲಾಗಲಿ ಒಂದು ಚಿಕ್ಕ ಸರಸ್ವತಿಯ ಮೂರ್ತಿಯನ್ನು ಬರೆದು ಅದರಲ್ಲಿ ಈ ಕೆಳಗೆ ಬಂದಿರುವ ಮೂಲ ಮಂತ್ರದ ಪ್ರಣವಾಕ್ಷರಗಳನ್ನೂ ಯಾವ ವಿದ್ಯೆಯನ್ನಭ್ಯಸಿಸುವುದಕೋಸ್ಕರ ಶಾರದಾನುಗ್ರಹವಾಗಬೇಕಾಗಿರುವುದೋ ಆ ವಿದ್ಯೆಯ ಹೆಸರನ್ನೂ ಬರೆದು ಆತಗಡನ್ನು ದೇವರ ಜಗುಲಿಯಮೇಲಿಟ್ಟು ಅಷ್ಟವಿಧಾರ್ಚನೆಯಿಂದ ಪೂಜಿಸಿ ಮಂತ್ರವನ್ನು ೯ ವೇಳೆ ಜಪಿಸಬೇಕು ಬಳಿಕ ಆ ತಗಡನ್ನು ಸುರಳಿ ಸುತ್ತಿ ರೇಷ್ಮೆ ದಾರದಿಂದ ಬಿಗಿದು, ಆ ದಿವಸ ತನ್ನ ಸಕ್ತ್ಯಾನುಸಾರ ಅನ್ನ ಸಂತರ್ಪಣೆಯನ್ನು ಮಾಡಿ ಸದರಿ ಯಂತ್ರವನ್ನು ತಾವು ಅಭ್ಯಾಸಮಾಡುವ ಕೋಣೆಯಲ್ಲಿಟ್ಟುಕೊಳ್ಳಬೇಕು ಮತ್ತು ಪ್ರತಿದಿನಸ ಭೋಜನ ಸಮಯದಲ್ಲಿ ಶುಚಿರ್ಭೂತನಾಗಿ ಪೂಜಿಸಬೇಕು. ಪರೀಕ್ಷೆಯು ನಡೆಯುವ ಕಾಲದಲ್ಲಿ ಸದರಿ ಯಂತ್ರವನ್ನು ಪೂಜಿಸಿ ದೇಹದಲ್ಲಿ ಧರಿಸಿಕೊಂಡು ಹೋಗಿ ಪರೀಕ್ಷೆಯನ್ನು ಕೊಡಲು ಖಂಡಿತವಾಗಿಯೂ ಪರೀಕ್ಷೆಯಲ್ಲಿ ಉತ್ತೀರ್ಣ

ಸರಸ್ವತಿ ಯಂತ್ರ

ಸಾಃ	ಐಂ	ಕ್ಲೀಂ
	ಓಂ	
ಕ್ಲೀಂ	ಐಂ	ಸಾಃ

ರಾಗುವರು. ಇದು ನಿಶ್ಚಯವಾಗಿಯೂ ಸುಳ್ಳಲ್ಲ. ಜ್ಞಾನಾರ್ಜನೆಗೋಸ್ಕರ ಅಭ್ಯಾಸಮಾಡತಕ್ಕವರು ಈ ಯಂತ್ರವನ್ನು ಧರಿಸಿಕೊಂಡು ಅಭ್ಯಾಸಮಾಡಲು 'ಶ್ರೀ ಶಾರದೆಯ ಅನುಗ್ರಹಕ್ಕೆ ಪಾತ್ರರಾಗುವುದಲ್ಲದೆ ವಿದ್ಯಾವಂತರೂ, ಬುದ್ಧಿವಂತರೂ ಆಗುವರು.

ಮಂತ್ರ :— ಅಸ್ಯ ಶ್ರೀ ಸರಸ್ವತಿ ಮಹಾಮಂತ್ರಸ್ಯ । ದಕ್ಷಿಣಾಮೂರ್ತಿ ರುಷಿಃ । ಸರಸ್ವತಿ ದೇವತಾ । ತ್ರಿಷ್ಟುಪ್ ಛಂದಃ । ಐಂ । ಬೀಜಂ । ಕ್ಲೀಂ । ಶಕ್ತಿಃ । ಸೌಃ ಕೀಲಕಂ । ಮಮ ಸರಸ್ವತಿ ಪ್ರಸಾದ ಸಿದ್ಧ್ಯರ್ಥೆ ಜಪೆ ವಿನಿಯೋಗಃ । ಐಂ । ಅಂಗುಷ್ಠಾಭ್ಯಾಂ ನಮಃ । ಕ್ಲೀಂ । ತರ್ಜನೀಭ್ಯಾಂ ನಮಃ । ಸೌಃ । ಮಧ್ಯಮಾಭ್ಯಾಂ ನಮಃ । ಐಂ । ಅನಾಮಿಕಾಭ್ಯಾಂ ನಮಃ । ಕ್ಲೀಂ । ಕನಿಷ್ಠಿಕಾಭ್ಯಾಂ ನಮಃ । ಸೌಃ । ಕರತಲಕರ ಪೃಷ್ಠಾಭ್ಯಾಂ ನಮಃ । ಯೋವಂ ಹೃದಯಾದಿ ನ್ಯಾಸಃ । ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ॥ ಧ್ಯಾನಂ ॥ ಶುಕ್ಲಾಂಬರಧರಂ ದೇವಿಂ । ಶುಕ್ಲ ಮಾತ್ಯಾವಿಭೂಷಿತಾಂ । ಶುಕ್ಲ ಚಂದನ ವಿಲಿಪ್ತಾಂತ । ಶುಕ್ಲಾಭರಣ ಭೂಷಿತಾಂ । ಶುದ್ಧಸ್ಫಟಿಕ ಸಂಕಾಂಶ । ರಜತಾದ್ರಿ ಸಮಪ್ರಭಾಂ । ಇಂದಿರೋಪಮನೇತ್ರಾಂತ । ಸ್ಫುರತ್ಕಮಲ ಸಂಸ್ಥಿತಾಂ । ಉದರೆ ಮುಕ್ತನಾಲಿಂಚ । ಪುಸ್ತಕಂ ಜ್ಞಾನ ಮುದ್ರಿಕಾಂ । ಏವಂಧ್ಯಾಯೇತು । ಮಹಾದೇವಿ । ವಾಣೀಂ ಸರ್ವ ಜಗತ್ಪ್ರಿಯಾಂ । ಲಂಬುತ್ಯಾದಿ ಪಂಚಪೂಜ । ಲಂಪೃಥ್ವ್ಯಾತ್ಮನೆ । ಗಂಧಂ ಪರಿಕಲ್ಪನಾಯನಮಃ । ಹಂ । ಆಕಾಶಂ ಪುಷ್ಪಂ ಪ್ರಕಲ್ಪಯಾಮಿನಮಃ । ಯಂ ವಾಯುಧೂಪಂ ಪ್ರಕಲ್ಪಯಾಮಿನಮಃ । ರಂ ಆಜ್ಞಾತ್ಸ್ಯನಾವೀಸಂ ಪರಿಕಲ್ಪಯಾಮಿನಮಃ । ವ್ಯಂ ಅನ್ಯುತಾತ್ಮನೈವೇದ್ಯಾಂ ಪರಿಕಲ್ಪಯಾಮಿನಮಃ । ಓಂ ಶ್ರೀ ಶಾರದಾಂಬಾಯನಮಃ ॥

ಅಥ ಪಾಶುಪಥ ಮಹಾಮಂತ್ರ

ಪ್ರಪಂಚದಲ್ಲಿ ಮಾನವರಿಗೆ ಒಂದಿಲ್ಲೊಂದು ತೊಂದರೆಯು ಸಂಘಟಿಸುತ್ತಿರುತ್ತದೆಂಬುದು ಸ್ವಭಾವಸಿದ್ಧವಾಗಿರುತ್ತದೆ. ಮನೆಯಲ್ಲಿ ಗ್ರಹಪೀಡೆ, ಮನಸ್ತಾಪ, ಕಲಹ. ರೋಗಾದಿ ಪೀಡೆ ಮುಂತಾದವುಗಳು ಉಂಟಾದ ಸಮದಲ್ಲಿ ಒಂದು ಶುಭದಿವಸ ಶುಭ ಮುಹೂರ್ತದಲ್ಲಿ ನೆಲಸಾರಣೆಯನ್ನು ಮಾಡಿ ಒಂದು ಭಂಗಾರದ ತಗದಿನಲ್ಲಿ ಈ ಕೆಳಗೆ ಬರೆದಿರುವ ಮೂಲ ಮಂತ್ರದ ಪ್ರಣವಾಕ್ಷರಳಗನ್ನು ಬರೆದು ಅಷ್ಟವಿಧಾರ್ಚನೆಯಿಂದ ಪೂಜಿಸಿ ಮಂತ್ರವನ್ನು ೧೦೮ ಸಾರಿ ಜಪಿಸಿ ಆ ಯಂತ್ರವನ್ನು ಯಾರು ಗ್ರಹಾದಿರೋಗ ಪೀಡಿತರಾಗಿರುವರೋ ಅವರಿಗೆ ಕಟ್ಟಿದರೆ ಸದರಿ ಪೀಡೆಗಳೆಲ್ಲಾ ನಿವಾರಣೆಯಾಗುವುವು. ಮನೆಯಲ್ಲಿ ಯಾರು ಮನಸ್ತಾಪ, ಜಗಳ,

ಪಾಶುಪತ ಮಹಾ ಯಂತ್ರ

ಅ	ವ	ಓಂ	ಪ	ಫ
ಗ್ನಿ	ರ್ಣಂ	ಶ್ಲೀಂ	ಶು	ಟ್

ಕಲಹ ಮಾಡುವರೋ ಅವರ ಹೆಸರನ್ನು ಆ ಯಂತ್ರದಲ್ಲಿ ಬರೆದು ಧರಿಸಿಕೊಂಡರೆ ಮೇಲೆ ಹೇಳಿರುವ ತೊಂದರೆಗಳೆಲ್ಲಾ ನಿವಾರಣೆಯಾಗಿ ಅತಿ ಪ್ರೀತಿಯಿಂದ ಇರುವರು.

ಮತ್ತು ಶತೃ ಜನರಿಂದ ಬಾಧೆಯುಂಟಾದ ಸಮಯದಲ್ಲಿ ಈ ಮಹಾ ಮಂತ್ರವನ್ನು ಮೇಲ್ಕಂಡಂತೆ ಪೂಜಿಸಿ ತಾಮ್ರ ತಗಡಿನಲ್ಲಿ ಮೂಲಮಂತ್ರದ ಪ್ರಣವಾಕ್ಷರಗಳನ್ನೂ, ಶತ್ರುವಿನ ಹೆಸರನ್ನೂ ಬರೆದು ಸುರಳಿಸುತ್ತಿ ರೇಷ್ಮೆ ದಾರದಿಂದ ಬಿಗಿದು ಅಷ್ಟವಿಧಾರ್ಚನೆಯಿಂದ ಪೂಜಿಸಿ ಮಂತ್ರವನ್ನು ಇಪ್ಪತ್ತೊಂದು ಸಾರಿ ಜಪಿಸಿ ಆ ಯಂತ್ರವನ್ನು ಧರಿಸಿಕೊಂಡರೆ ಶತೃಗಳಿಂದ ಉಂಟಾದ ಯಾವತ್ತು ದೊಂದರೆಗಳು ನಿವಾರಣೆಯಾಗಿ ಶತೃಗಳು ಮಿತ್ರರಾಗುವರು. ಈ ಮಹಾಮಂತ್ರ ಯೋಗವು ಹಿಂದೆ ದ್ವಾಪರಯುಗದಲ್ಲಿ ಶ್ರೀ ಪರಶಿವನು ಕಿರಾತ ರುದ್ರಲೀಲೆಯಲ್ಲಿ ಅರ್ಜುನನಿಗೆ ಕೊಟ್ಟ ಪಾಶುಪತ ಮಹಾಮಂತ್ರವು.

ಮಂತ್ರ :—ಅಸ್ಯ ಶ್ರೀ ಪಾಶುಪತ ಮಹಾಮಂತ್ರಸ್ಯ | ಪಶುಪತಿ ಪರಮೇಶ್ವರರುಷಿಃ | ಋಗ್ಯಜುಸಾಮಾಥರ್ವಣಛಂದಾಸಃ | ಪಾಶುಪತ ರುದ್ರೋದೇವತಾ | ಶ್ಲಾಂ | ಬೀಜಂ | ಶ್ಲೀಂ ಶಕ್ತಿಃ | ಪಾಶುಪತಕೀಲಕಂ | ಮಮಸರ್ವರೋಗ ಪೀಡ ನಿವಾರಣ ಶತ್ರುಜಯಾರ್ಥೇ ಜಪೆವಿನಿಯೋಗಃ || ಮೂಲಮಂತ್ರ || ಧ್ಯಾನಂ | ಅಗ್ನಿ ವರ್ಣಂ | ಓಂ | ಶ್ಲೀಂ | ಪಶುಪಟ್ ||—ಇತಿ ಪಾಶುಪತ ಮಹಾಂತ್ರಯೋಗಃ

ಅಥ ವಾಯುವ್ಯಾಸ್ತ್ರ ಮಹಾ ಮಂತ್ರ

ಶತೃಗಳಿಂದ ಕಲಹ, ಯುದ್ಧ ಮುಂತಾದ ತೊಂದರೆಗಳು ಸಂಭವಿಸಿದ ಕಾಲದಲ್ಲಿ ಈ ಮಹಾಮಂತ್ರವನ್ನು ಒಂದು ಶುಭ ದಿವಸ ಶುಭ ಮುಹೂರ್ತದಲ್ಲಿ ಸಿದ್ಧಿ ಮಾಡಿಕೊಂಡು ಪೂಜಿಸಿ ಈ ಕೆಳಗೆ ಬರೆದಿರುವ ಮೂಲ ಮಂತ್ರದ ಪ್ರಣವಾಕ್ಷರಗಳನ್ನು ಒಂದು ಧೂಮ್ರವರ್ಣದ ತಗಡಿನಲ್ಲಿ ಬರೆದು ಅಷ್ಟಧಾವಿರ್ಚನೆಯಿಂದ ಪೂಜಿಸಿ ಸುರಳಿ ಸುತ್ತಿ ಧೂಮ್ರ ವರ್ಣದ ದಾರದಿಂದ ಬಿಗಿದು, ಆ ಯಂತ್ರದಲ್ಲಿ ಶತೃವಿನ ಹೆಸಂನ್ನು ಬರೆದು ಸುರುಳಿ ಸುತ್ತಿ ದಾರದಿಂದ ಬಿಗಿಯಬೇಕು. ಬಳಿಕ ಸದರಿ ಮಂತ್ರವನ್ನು ೨೧ ಸಾರಿ ಜಪಿಸಿ ಯಂತ್ರವನ್ನು ದೇಹದಲ್ಲಿ ಧರಿಸಿಕೊಂಡು ೩ ಕಲ್ಲು ಹರಳುಗಳನ್ನು ತೆಗೆದುಕೊಂಡು ಮಂತ್ರದಿಂದ ಮೂರು ಸಾರಿ ಮಂತ್ರಿಸಿ ಮುಂಭಾಗದಲ್ಲಿ ೨ ಕಲ್ಲು ಹರಳುಗಳನ್ನೂ, ಹಿಂಭಾಗದಲ್ಲಿ ೧ ಕಲ್ಲು ಹರಳನ್ನೂ ಒಗೆದರೆ ಶತ್ರುಗಳು ಪರಾಜಿತರಾಗುವರು. ಅಥವಾ ಸಂಧಾನಕ್ಕೆ ಬರುವರು. ಮನೆಯಲ್ಲಿ ದುರಿತಗಳೊದಿಗಿರುವ ಸಮಯದಲ್ಲಿ ಈ ಮಹಾ ಮಂತ್ರದ ಮಹಾ ಯಂತ್ರವನ್ನು ಬರೆದು ಮನೆಯಲ್ಲಿ ದೇವರ ಜಗುಲಿಯಮೇಲೆ

ವಾಯುವ್ಯಾಸ್ತ್ರ ಮಹಾ ಯಂತ್ರ

	ವಂ	
ಧೂ	ರ್ಣಂ	ಮ್ರೂ
ಮ್ರ	ಯಿಂ	ರುಂ
ವ	ಯುಂ	ಫ
	ಟ್	

ಇಟ್ಟು ಪೂಜಿಸಿದರೆ ಆ ದುರಿತಗಳೆಲ್ಲಾ ಪರಿಹಾರವಾಗಿ ಸರ್ವ ವಿಷಯದಲ್ಲಿಯೂ ಸುಖವುಂಟಾಗುವುದು.

ಮಂತ್ರ:—ಅಸ್ಯ ಶ್ರೀ ಮಹಾಮಂತ್ರಸ್ಯ | ವರುಣಾದಿತ್ಯರುಷಿಃ| ಪಂಕ್ತೋಃ ಛಂದಃ | ಯಾಂ | ಬೀಜಂ | ಯೀಂ| ಶಕ್ತಿ | ಯೂಂ | ಕೀಲಕಂ ಮಮ ಸರ್ವ ತತ್ಯ ಉಚ್ಚಾಟನಾತ್ \ಜಪೆ ವಿನಿಯೋಗಃ ||

ಮೂಲ ಮಂತ್ರ:— ಧ್ಯಾನಂ || ಧೂಮ್ರಣಂ | ವಂ | ಯಿಂ | ಯುಂ | ಮೂರುಂ ಫಟ್ ||—ಇತಿ ವಾಯವ್ಯಾಸ್ತ್ರ ಮಹಾಮಂತ್ರ ಯೋಗಃ.

ಅಥ ಆಗ್ನೇಯಾಸ್ತ್ರ ಮಹಾಮಂತ್ರ

ಪ್ರಪಂಚದಲ್ಲಿ ಮನುಜರಿಗೆ ಕ್ಷುದ್ರ ಗ್ರಹಾದಿ ಪೀಡೆ, ಮಾಟ, ಮರುವೆ, ಚೋರಾಗ್ನಿ ರಾಜಭಯ, ಇವೇ ಮುಂತಾದ ಪೀಡೆಗಳು ಸಂಭವಿಸಿದ ಕಾಲದಲ್ಲಿ ಮಂಗಳವಾರದ ದಿವಸ ಶುಭಮುಹೂರ್ತದಲ್ಲಿ ಮನೆಯನ್ನು ನೆಲಸಾರಣೆಯಿಂದ ಶುದ್ಧಿ ಮಾಡಿ ರಂಗವಲ್ಲಿಯನ್ನಿಟ್ಟು, ಒಂದು ಬಂಗಾರದ ತಗಡಿನಲ್ಲಿ ಈ ಕೆಳಗೆ ಬರೆದಿರುವ ಮೂಲ ಮಂತ್ರದ ಪ್ರಣವಾಕ್ಷರಗಳನ್ನೂ, ಧರಿಸಿಕೊಳ್ಳತಕ್ಕವನ ಹೆಸರನ್ನೂ ಬರೆದು ಅಷ್ಟವಿಧಾರ್ಚನೆಯಿಂದ ಪೂಜಿಸಿ ಸುರುಳಿಸುತ್ತಿ ಕೆಂಪು ದಾರದಿಂದ ಬಿಗಿದು, ಮಂತ್ರವನ್ನು ೧೦೮ ಸಾರಿ ಜಪಿಸಿ ಧರಿಸಿಕೊಂಡರೆ ಸದರಿ ಪೀಡೆಗಳೆಲ್ಲಾ ನಿವಾರಣೆಯಾಗಿ ಸುಖವುಂಟಾಗುವುದು. ಶತ್ರುಗಳಿಂದ ಭಾಧೆಯುಂಟಾದ ಕಾಲದಲ್ಲಿ ಮೇಲೆ ಹೇಳಿದಂತೆ ಯಂತ್ರವನ್ನು ಬರೆದು ಆ ಯಂತ್ರದಲ್ಲಿ ಶತೃವಿನ ಕುಲ, ಗೋತ್ರ, ಹೆಸರುಗಳನ್ನು ಬರೆದು ಅಷ್ಟ ವಿಧಾರ್ಜನೆಯಿಂದ ಪೂಜಿಸಿ, ಮಂತ್ರವನ್ನು ೧೦೮ ಸಾರಿ ಜಪಿಸಿ ತಾನು ಧರಿಸಿಕೊಂಡು ಮಂತ್ರವನ್ನು ಪ್ರತಿ ದಿವಸವೂ ೫ ಸಾರಿ ಪಠಣ ಮಾಡುತ್ತಾ ಹೋದರೆ ಒಣಹುಲ್ಲನ್ನು ಅಗ್ನಿಯು ಕ್ಷಣಾರ್ಧದಲ್ಲಿ ಸುಟ್ಟು ಭಸ್ಮ ಮಾಡುವ ರೀತಿಯಲ್ಲಿ ಶತ್ರುವಿನ ಕೋಪ ತಾಪಗಳೆಲ್ಲಾ ಸುಟ್ಟು ಭಸ್ಮವಾಗುವುವು. ಮತ್ತು ಶತ್ರುಗಳು ಮಿತ್ರರಾಗುವರು.

ಆಗ್ನೇಯಾಸ್ತ್ರ ಮಹಾಯಂತ್ರ

ಲಾ	ರಂ	ಮಾ
ರಂ		ರಂ
ಜ್ವಾ	ಹ್ರೀಂ	ಲಿ
ರಂ		ರಂ
ಶಂ	ರಂ	ನೀ


ಮಂತ್ರ:—ಅಸ್ಯಶ್ರೀ ಆಗ್ನೇಯಾಸ್ತ್ರ ಮಹಾಮಂತ್ರಸ್ಯ | ಹಯಗ್ರೀವ ಋಷಿಃ | ಅನುಷ್ಟುಪ್ ಚಂದಃ | ಆಜ್ನೇಯಾಸ್ತ್ರವೋ ದೇವ | ಕ್ಷುದ್ರುಗ್ರಹಪೀಡಾ ಶತ್ರುವಿಜಯಾರ್ಥೇ ಜಪವಿನಿಯೋಗಃ

ಮೂಲಮಂತ್ರ:— ರಂ | ರಂ | ರಂ | ರಂ | ರಂ | ರಂ | ಜ್ವಾಲಾ ಮಾಲಿನೀಶಂ | ಘಟುಸ್ವಾಹಾ ||—ಇತಿ ಆಗ್ನೇಯಾಸ್ತ್ರ ಮಹಾಮಂತ್ರಯೋಗಃ||

ಅಥ ಚೌಷಷ್ಟಿಯೋಗಿನಿಯರ ಮಹಾಮಂತ್ರ

ಸರ್ವಗ್ರಹ ಪೀಡೆಗಳಿಗೂ ಊಟದಲ್ಲಿ ಮದ್ದು ಹಾಕಿರುವುದಕ್ಕೂ, ಕೈಕಾಲುಗಳು ಹರಿಯುವುದಕ್ಕೂ ಕಾಮಾಲೆ ವಾಯುಶೂಲೆ ರೋಗಗಳಿಗೂ, ನಿದ್ದೆ ಮಾಡುವ ಕಾಲದಲ್ಲಿ ಮೆಟ್ಟಿ ಬೀಳುವುದಕ್ಕೂ ಈ ಮಂತ್ರವನ್ನು ಒಂದು ಶುಭದಿನಸ ಶುಭ ಮುಹೂರ್ತದಲ್ಲಿ ನೆಲ ಸಾರಣೆಯಂ ಮಾಡಿ ರಂಗವಲ್ಲಿಯನ್ನಿಟ್ಟು ಆ ಮಧ್ಯದಲ್ಲಿ ಶುಚಿರ್ಭೂತನಾಗಿ ಕುಳಿತುಕೊಂಡು ೯ ವೇಳೆ ಜಪಿಸಲು ಸದರಿ ರೋಗಾದಿ ಪೀಡೆಗಳು ನಿವಾರಣೆಯಾಗುವವು. ಮತ್ತು ಒಂದು ತಾಮ್ರನ ತಗಡಿದಲ್ಲಿ ಓಂ|ಹ್ರೀಂ| ಹ್ರೀಂ | ಹ್ರೀಂ | ಹ್ರೀಂ | ಎಂಬ ಪ್ರಣವಾಕ್ಷರಗಳನ್ನು ಬರೆದು, ಮಂತ್ರವನ್ನು ೨೧ ಸಾರಿ ಜಪಿಸಿ, ಸದರಿ ಗ್ರಹ ಪೀಡಾದಿ ರೋಗಗ್ರಸ್ತರೂ, ಅಂಜುಬುರುಕರೂ, ಧೈರ್ಯವಿಲ್ಲದನರೂ ಕಟ್ಟಿಕೊಳ್ಳಲು ಸದರಿ ಗ್ರಹಪೀಡಾದಿ ರೋಗಗಳು ನಿವಾರಣೆಯಾಗುವನಲ್ಲದೆ ಅತಿಶಯ ಧೈರ್ಯವನ್ನು ಪಡೆಯುವರು.

ಚೌಷಷ್ಟಿಯೋಗಿನಿಯರ ಯಂತ್ರ



ಮಂತ್ರ —ದಿವ್ಯಯೋಗಿ| ಮಹಾಯೋಗಿ | ಗಣೇಶ್ವರಿ | ಶಾಕಿನಿ | ಡಾಕಿನಿ| ಕಾಳಿ | ಕಾಳರಾತ್ರಿ | ನಿಶಾಚರಿ | ಹ್ರೀಂಕಾರಿ | ರೌದ್ರೀ | ವೇತಾಳಿ | ಹ್ರೂಂಕರಿ| ಬುಮಿ | ಊರ್ಧ್ವಕೇಶಿ | ವಿರೂಪಾಕ್ಷೀ | ಸುರಂಗಿ ರಣಭೀಕರಿ | ಶಾಂಭವೀ | ವೀರಭದ್ರೆ | ಚಾಮುಂಡೀ ಕಲಹಪ್ರಿಯೇ | ರಾಕ್ಷಸೀ | ಅಘೋರ ರಕ್ತಾಕ್ಷಿ ಪಾಜಿಜಗನ್ಮಾತೆ | ರೇಣಿಕೆ | ದುರ್ಧರ ಓಂಕಾಳಿ | ಬನ್ನಿ ಮಹಾಂಕಾಳ ದುರ್ಗಿ ಮಹೇಶ್ವರಿ ಸ್ವಾಹಾ ||—ಇತಿ ಚೌಷಷ್ಟಿಯೋಗಿನಿಯರ ಮಹಾಮಂತ್ರಯೋಗಃ.

ಅಥ ಲಕ್ಷ್ಮೀ ಮಹಾ ಮಂತ್ರ

ಪ್ರಪಂಚದಲ್ಲಿ ಪ್ರತಿಯೊಬ್ಬನೂ ತನ್ನ ತನ್ನ ಉದ್ಯೋಗದಲ್ಲಿ ನಿರತನಾಗಿದ್ದು ಲಾಭವನ್ನು ಹೊಂದದೆ ನಷ್ಟಪಟ್ಟ ಸಮಯವಲ್ಲಿ ಒಂದು ಶುಕ್ರವಾರದ ದಿವಸ ಶುಭ ಮುಹೂರ್ತದಲ್ಲಿ ಮನೆಯಲ್ಲಿ ನೆಲಸಾರಣೆಯನ್ನು ಮಾಡಿ ರಂಗವಲ್ಲಿಯನ್ನಿಟ್ಟು, ಒಂದು ಭಂಗಾರದ ತಗಡಿನಲ್ಲಿ ಲಕ್ಷ್ಮೀದೇವಿಯ ಒಂದು ಚಿಕ್ಕ ಪ್ರತಿಮೆಯನ್ನು ಬರೆದು, ಸದರಿ ಪ್ರತಿಮೆಗಳನ್ನು ದೇವರ ಜಗುಲಿಯ ಮೇಲೆ ಒಂದು ಗದ್ದಿಗೆಯನ್ನು ಹಾಕಿ ಅದರ ಮೇಲೆ ಇಟ್ಟು, ಸ್ನಾನ ಸಂಧ್ಯಾವಂದಾನದಿಗಳಿಂದ ಶುಚಿರ್ಭೂತನಾಗಿ ಆ ಪ್ರತಿಮೆಯನ್ನು ಅಷ್ಟವಿಧಾರ್ಚನೆಯಿಂದ ಪೂಜಿಸಿ ಲಕ್ಷ್ಮೀಮಹಾಮಂತ್ರವನ್ನು ೨೧ ಸಾರಿ ಜಪಿಸಿ,

ಲಕ್ಷ್ಮೀ ಮಹಾಯಂತ್ರ

ಓಂ	ಓಂ	ಓಂ	ಓಂ	ಓಂ
ಓಂ	ಓಂ	ಓಂ	ಓಂ	ಓಂ
ಓಂ	ಓಂ	ಓಂ	ಓಂ	ಓಂ
ಓಂ	ಓಂ	ಓಂ	ಓಂ	ಓಂ
ಓಂ	ಓಂ	ಓಂ	ಓಂ	ಓಂ

ತನ್ನ ಶಕ್ತ್ಯಾನುಸಾರ ರನ್ನಸಂತರ್ಪಣೆಯನ್ನು ನಡೆಸಬೇಕು. ಹೀಗೆ ೫ ಶುಕ್ರವಾರಗಳು ನಡೆಸಬೇಕು ಮತ್ತು ಕಡೆಯ ಶುಕ್ರವಾರದ ದಿವಸ ಆ ಪ್ರತಿಮೆಯನ್ನು ಮುತ್ತೈದೆ ಸ್ತ್ರೀಯಳಿಗೆ ದಾನಮಾಡಬೇಕು. ಈ ರೀತಿಯಲ್ಲಿ ಮಾಡಲು ಅವರಿಗೆ ಶ್ರೀ ಲಕ್ಷ್ಮೀದೇವಿಯ ಕಟಾಕ್ಷದಿಂದ ಅವರು ಕೈಗೊಂಡಿರತಕ್ಕ ಉದ್ಯೋಗಗಳಲ್ಲಿ ಹೆಚ್ಚಾಗಿ ಲಾಭವು ದೊರೆಯುವುದು.

ಮಂತ್ರ :— ಓಂ | ಉಪೈತುನಾಂ | ದೇವಸುಖಃ | ಕೀರ್ತಿಶ್ಚ ಮಣಿನಾ ಸಹ | ಪ್ರಾದುರ್ಭೂತೋ ಸ್ಮಿರಾಷ್ಟ್ರೇಸ್ಮಿನ್ ಕೀರ್ತಿಮೃದ್ಧಿಂ ದದಾತುಮೆ ||— ಈ ಮಂತ್ರವನ್ನು ಮೇಲೆ ಹೇಳಿರುವ ಪ್ರಕಾರ ಜಪಿಸಿ ಧರಿಸಿಕೊಳ್ಳುವುದರಿಂದ ಸರ್ವ ಸೌಭಾಗ್ಯ ಪುತ್ರಪೌತ್ರಾಭಿವೃದ್ಧಿಯೂ ಧನಲಾಭವೂ ಉಂಟಾಗುವುದು.

ಇತಿ ಲಕ್ಷ್ಮೀ ಮಹಾಮಂತ್ರ ಯೋಗಃ

ಅಥ ಇಂದ್ರಾಕ್ಷಿ ಮಹಾಮಂತ್ರ

ದುಷ್ಟಜನರಿಂದ ಕಷ್ಟನಷ್ಟಗಳೂ ಮರ್ಯಾದಾಭಂಗವೂ ಉಂಟಾಗುವ ಸಂದರ್ಭವೊದಗಿದ ಸಮಯದಲ್ಲಿ ಒಂದು ಪಂಚಲೋಹದ ತಗಡಿನಲ್ಲಿ ಈ ಮಹಾಮಂತ್ರದ ಪ್ರಣವಾಕ್ಷರಗಳನ್ನೂ ದುಷ್ಟ ಮನುಷ್ಯನ ಹೆಸರನ್ನೂ ಬರೆದು ಕೆಂಪು ಗಂಧ, ಕೆಂಪು ಹೂವುಗಳಿಂದ ಮಂಗಳವಾರ ಬೆಳಗಿನ ಝಾಮದಲ್ಲಿ ಸ್ನಾನ ಸಂಧ್ಯಾವಂದನಾದಿಗಳಂ ತೀರಿಸಿಕೊಂಡು ಅಷ್ಟವಿಧಾರ್ಚನೆಯಿಂದ ಪೂಜಿಸಿ ಈ ಕೆಳಗೆ ಬರೆದಿರುವ ಮಂತ್ರವನ್ನು ೧೦೮ ಸಾರಿ ಜಪಿಸಿ ಆ ತಗಡನ್ನು ಸುರುಳಿಸುತ್ತಿ ರೇಷ್ಮೆಯ ದಾರದಿಂದ ಬಿಗಿದು ದೇಹದಲ್ಲಿ ಧರಿಸಿಕೊಳ್ಳಬೇಕು. ಹೀಗೆ ಧರಿಸಿಕೊಳ್ಳಲು ಸದರಿ ತೊಂದರೆಗಳೆಲ್ಲವೂ ನಿವಾರಣೆಯಾಗುವುವು.

ಇಂದ್ರಾಕ್ಷಿ ಮಹಾಯಂತ್ರ

ಹ್ರಾಂ	ಹ್ರೀಂ
ಓಂ	
ಹ್ರೀಂ	ಹ್ರೂಂ

ಮಂತ್ರ :— ಓಂ ನಮೋ ಭಗವತೇ | ಇಂದ್ರಾಕ್ಷಿ ರಕ್ಷ ರಕ್ಷ | ಮನುಶತ್ರು ದುಃಖಗ್ರಂಥಿ | ಸ್ಫೋಟಾಯ | ಸ್ಫೋಟಾಯ | ಮೆನುಶತ್ರು ಬಂದಾಯ | ಬಂದಾಯ | ಮನೋಗ್ರಂಥಿ | ಶರಗ್ರಂಥಿ | ಕಾಯ ಹಸ್ತಾಯ | ಹಸ್ತಾಯ | ರಕ್ಷಾಯ | ರಕ್ಷಾಯ | ಓಂ | ಹ್ರೀಂ | ಹ್ರೀಂ | ಹ್ರಾಂ | ಹ್ರೂಂ | ಪಟುಸ್ವಾಹಾ || ಈ ಮಂತ್ರವನ್ನು ಅನುಷ್ಠಾನ ಮಾಡುವವರಿಗೆ ಸರ್ವ ವಿಧದಲ್ಲಿಯೂ ಸುಖವುಂಟಾಗುವುದು.

ಇತಿ ಇಂದ್ರಾಕ್ಷಿ ಮಹಾ ಮಂತ್ರಯೋಗಃ

ಅಥ ಕಾಯಸಿದ್ಧಿ ಮಹಾಮೂಲ ಮಂತ್ರ

ಈ ಮಹಾ ಮಂತ್ರವನ್ನು ಜಿತೇಂದ್ರಿಯನಾಗಿಯೂ, ಅಚಲ ಮನಸ್ಸಿನಿಂದಲೂ ಏಕೋಭಾವದಿಂದಲೂ ಕೂಡಿ ಪಂಚಪ್ರಣವಾದಿಯಾದ ಯಂತ್ರಸಿಮಾರ್ಗದಿಂದ

ಪ್ರತಿ ದಿವಸವೂ ೧೦೮ ಸಾರಿಯಂತೆ ೭ ವಾರಗಳು ಪೂಜಿಸಿ, ನಂತರ ಮೂಲಮಂತ್ರವನ್ನು ಪ್ರತಿದಿವಸವೂ ಪ್ರಾತಃಕಾಲ ಮಧ್ಯಾಹ್ನಕಾಲ, ಸಾಯಂಕಾಲಗಳಲ್ಲಿ ಐದು ಸಾವಿರದಂತೆ ೬೬ ದಿವಸಗಳು ಪಠನಮಾಡಬೇಕು. ಈ ಮಂತ್ರವನ್ನು ಎರಡು ವಾರಗಳವರೆಗೆ ನೀರಿನಲ್ಲಿ ಕುಳಿತುಕೊಂಡು ೫ ಸಾರಿ ಪಠಣಮಾಡಿ ನೀರುಮಲ್ಲಿಗೆಯ ಬೇರಿನ ರಸವನ್ನು ೩ ತೊಲವನ್ನು ನಿವೇದಿಸಿ ಪಾನಮಾಡಬೇಕು. ಬಳಿಕ ಎರಡುವಾರಗಳವರೆಗೆ ಉತ್ತರಾಣಿಬೀಜದ ಪಾಯಸವನ್ನು ನಿವೇದಿಸಿ ಸೇವಿಸಬೇಕು. ಹೀಗೆ ಮಾಡಲು ಮಂತ್ರವು ಸಿದ್ಧಿಸುವುದಲ್ಲದೆ ಕಾಯಶುದ್ಧಿಯಾಗುವುದು ಮತ್ತು ಇತರರಿಂದ ಸಂಭವಿಸುವ ತೊಂದರೆಗಳೆಲ್ಲವೂ ಪರಿಹಾರವಾಗಿ ಸರ್ವದಧದಲ್ಲಿಯೂ ಸುಖವುಂಟಾಗುವುದು. ಮಂತ್ರ ಪಠಿಸುವವರಿಗೂ ನೀರಿನಲ್ಲಿರಬೇಕು

ಕಾಯ ಸಿದ್ಧಿ ಮಹಾ
ಮೂಲ ಯಂತ್ರ

ಪಂ	ಪ್ರಾಂ	ಹ್ರೀಂ
ಷಂ	ಓಂ	ಹ್ರೂಂ

ಮಂತ್ರ:—ಅಥಹಂಹಂವಕ್ಷ್ಯಾಮಿ । ಕಾಯ ಸಿದ್ಧಿ ನರಾಶ್ರಿತಾಂ । ಪರಯಾಪೀಡಿತಾಭೂತ್ವಾ ನಾನಾವ್ಯಸನ ಯಂತ್ರಿತಾಃ। ದೇಹಬಾಧಾದಿ ಸಂಯುಕ್ತಾ। ಕಾಲಸ್ಯ ವಶಮಾಗತಃ। ಯಾತನಾಭ್ಯಾಂ ಪರಿದೃಷ್ಟಾಂ । ವೇಧಂತೆಖಲು ಶೋಭನೇ ತೇಷಾಂ ಕಾಯಸ್ಯಸಿದ್ಧ್ಯರ್ಥೆ । ನಿತ್ಯಂತಾಂಗಂತು ಮೇವಚ । ಅತ್ರಯಂ ಕಲ್ಪಃ ಕೇನಾಪಿವಿಧಿನಾಂ । ಶುದ್ಧಾತ್ಮಾಜಿತೇಂದ್ರಿಯೋಃ । ಭೂತ್ವಾವಕ್ಷ್ಯಮಾಣಯಂತ್ರಂ ತನ್ಮಂತ್ರೇಣ । ಸಂಪೂರ್ಯ । ಪಂಚಕೋಣಾತ್ಮಕಂಕೇಕ್ಷ್ಯ ಪಂಚ ಓಂಕಾರಸಂಯುತಂ । ತ್ರಿಪಾರಂಪ್ರತ್ಯಹಮಪಿ ಅಷ್ಟೋತ್ತರಂ ಪೂಜಯಿತ್ವಾಷಟ್ತ್ರಂಶಟ್ತಿ ನಾನಿ ಪ್ರಾತಃ । ಪಂಚಸಹಸ್ರಂ ಏವಂಕಾಲತ್ರಯೇಪಿ । ಚಕ್ಷ್ವಾರೇನ್ಮೈಲ್ಯ ಜಪಿತ್ವಾತ ತ್ರಾಯನ್ಮಂತ್ರಃ ॥

ಮೂಲಮಂತ್ರ:—ಓಂ । ನಮೋಭಗವತೇ । ಮಹಾವಿದ್ಯಾತ್ಮಿಕಾಯ । ದೇಹಿಮೆ ಕಾಯಸಿದ್ಧಿಂ । ಮಹಾ ಪರಾಶಕ್ತಿ ಮೂರ್ತಯೇ । ಜರಾಂದಹ । ದಹಮಾಲಿಸ್ಯಂ । ಹನಹನ । ಪುಷ್ಟಿಂ ದೇಹಿದೇಹಿ । ಮಾಂರಕ್ಷರಕ್ಷ । ವಜ್ರಾದಿ ಭಯಂಹರಹರ । ಹ್ರಾಂ । ಹ್ರೀಂ । ಹ್ರೂಂ । ಷಂ । ಫಟುಸ್ವಾಹಾ ॥ ಇತಿ ಜಲಾಪ್ಲುತೋ। ಜಲೇನಾದ ಮಲ್ಲಿಕಾ ಮೂಲರಸಂ ಪಟ್ತುಲಾಪರಿಮಿತೌ । ಮಂತ್ರಯದ್ವಿವಾರಂ। ನಿವೇದ್ಯತದನು । ಉತ್ತರಾಣಿ ಬೀಜಾನಾದಾಯ ಪಾಯಸಂಕೃತ್ವಾ । ದ್ವಿವಾರಂಭಕ್ಷಯೇತ್ ॥ ಯಾವತ್ ಕ್ಷ್ಯನ್ನಿವರ್ತಂತೇ । ತಾವತ್ ಕುರ್ಯಾತ್ । ತೇನಾ ಕಾಯಸಿದ್ಧಿಯುಕ್ತಾ ಬಲವಜ್ರಾದಿ ಹತೋಪಿಬಾಧಾನ್ ಪ್ರಾಪ್ನೋತಿ । ನಿತ್ಯ ಸರ್ವತ್ರ ಸಂಚರೇತ್ ॥—ಇತಿ ಕಾಯಸಿದ್ಧಿ ಮಹಾ ಮೂಲಯಂತ್ರ ಯೋಗಃ

ಅಥಮಹಾ ಗಣಪತಿ ಮೂಲಮಂತ್ರ

ಒಂದು ಶುಭದಿವಸ ಶುಭಮುಹೂರ್ತದಲ್ಲಿ ಮನೆಯಲ್ಲಿ ನೆಲವನ್ನು ಸಾರಿಸಿ ರಂಗವಲ್ಲಿಯನ್ನಿಟ್ಟು ಒಂದು ಕುಡಿ ಬಾಳೆಯ ಎಲೆಯ ಮೇಲೆ ನವಧಾನ್ಯಗಳನ್ನು

ಹಾಕಿ ಗುಡ್ಡೆಮಾಡಿ ಆ ಧಾನ್ಯದ ಗುಡ್ಡೆಯಮೇಲೆ ಅರಿಶಿನದ ಪುಡಿಯಿಂದ ಮಾಡಿದ ಗಣಪತಿಯನ್ನಾಗಲಿ ಅಥವಾ ಬೆಳ್ಳಿ ಭಂಗಾರದ ಗಣಪತಿಯ ವಿಗ್ರಹವನ್ನಾಗಲಿ ಮಾಡಿಸಿ ಇಡಬೇಕು. ಬಳಿಕ ಸ್ನಾನ ಸಂಧ್ಯಾವಂದನಾದಿಗಳಿಂದ ಶುಚಿರ್ಭೂತನಾಗಿ ಈ ಕೆಳಗೆ ಬರೆದಿರುವ ಮಂತ್ರವನ್ನು ೧೦೮ ಸಾರಿ ಪಠನಮಾಡುತ್ತಾ ೧೦೮ ತುಂಬೆ ಹೂವುಗಳಿಂದ ಅಷ್ಟವಿಧಾರ್ಚನೆಯಿಂ ಪೂಜಿಸಿ, ತರುವಾಯ ಆ ಗಣಪತಿಯ ವಿಗ್ರಹವನ್ನು ದೇವರ ಜಗುಲಿಯ ಮೇಲಿಟ್ಟು ಪ್ರತಿದಿವಸವೂ ಪೂಜಿಸುತ್ತಿರಬೇಕು ಮತ್ತು ಯಾವುದಾದರೊಂದು ಕಾರ್ಯದ ಉದ್ದಿಶ್ಯ ಹೋಗುವ ಸಮಯದಲ್ಲಿ ಸದರಿ ಗಣಪತಿಯನ್ನು ಪೂಜಿಸಿ. ಮಂತ್ರವನ್ನು ೨೧ ಸಾರಿ ಜಪಿಸಿ ಆ ಕೆಲಸವನ್ನಾರಂಭಿಸಲು ಆ ಕಾರ್ಯಕ್ಕೆ ಯಾವ ವಿಧವಾದ ವಿಘ್ನಗಳೂ ಒದಗದೆ ಶೀಘ್ರದಲ್ಲಿಯೇ ಸಿದ್ಧಿಸುವುದು.

ಮಂತ್ರ.—ಓಂ ನಮೋ ಮಹಾಗಣಪತಿಯೇ । ಭಗವತೇ ಸರ್ವ ಮೂಲಾಭೀಷ್ಟನಾಯ ಸರ್ವ ಸಿದ್ಧಿಪ್ರದಾಯ । ಮಹಾ ವಿದ್ಯಾಂಧರ । ಧರ । ಧಾರಯ ಧಾರಯ । ಹ್ರೀಂ । ಹ್ರಾಂ । ಹ್ರೂಂ । ದೇಹಿಮೆ । ಸರ್ವ ಸಿದ್ಧಿಂ । ಏಹೇಹಿ ಸಾಕ್ಷಾತ್ಕುರು । ಮಧ್ಯಶಮಾಂ । ರಕ್ಷರಕ್ಷ । ಸರ್ವ ದುಷ್ಟಕಾರ್ಯಂ ಹನಹನ । ಪಚನ । ಪಚನ । ಸಿದ್ಧಿಂ । ದೇಹಿ । ಶ್ರೀಂ । ಶ್ರೀಂ । ಹ್ರೀಂ । ಹ್ರಾಂ । ಝುಂ । ಮಹಾ ಗಣಪತಿಯೇ । ಫಂ । ಫಟುಸ್ವಾಹಾ ॥

ಅಥ ದಕ್ಷಿಣ ಕಾಳಿಕಾಮಂತ್ರ

ಆಶ್ವೀಜಶುದ್ಧ ಪಾಡ್ಯದ ದಿವಸ ಬೆಳಗಿನ ಝಾವದಲ್ಲಿ ಎದ್ದು ಸ್ನಾನ ಸಂಧ್ಯಾವಂದನಾದಿಗಳಿಂದ ಶುಚಿರ್ಭೂತನಾಗಿ ಒಂದು ಕೊಠಡಿಯಲ್ಲಿ ನೆಲಸಾರಣೆಯಂ ಮಾಡಿ ರಂಗವಲ್ಲಿಯನ್ನಿಟ್ಟು ಒಂದು ಮಣೆಯಮೇಲೆ ಅಖಂಡ ದೀಪವನ್ನಿಟ್ಟು ಅದು ಆರಿಹೋಗದಂತೆ ನೋಡಿಕೊಳ್ಳುತ್ತಿರಬೇಕು. ಮತ್ತು ಆ ಅಖಂಡ ದೀಪವನ್ನು ಅರಿಶಿನ, ಕುಂಕುಮ, ಧೂಪ, ದೀಪ, ನೈವೇದ್ಯ, ತಾಂಬೂಲಾದಿಗಳಿಂದ ಪೂಜಿಸಬೇಕು. ಹೀಗೆ ಪ್ರತಿ ದಿವಸವೂ ತ್ರಿಕಾಲಗಳಲ್ಲಿಯೂ ಸ್ನಾನಮಾಡಿ ಶುಚಿರ್ಭೂತನಾಗಿ ಪೂಜಿಸಬೇಕು. ಈ ಪ್ರಕಾರ ಆಶ್ವೀಜ ಶುದ್ಧ ಪಾಡ್ಯ ಮೊದಲ್ಗೊಂಡು ದಶಮಿಯವರೆಗೆ ಹತ್ತು ದಿನಗಳು ಪರಿಶುದ್ಧ ಮನಸ್ಕನಾಗಿ, ಈ ಕೆಳಗೆ ಬರೆದಿರುವ ಮೂಲಮಂತ್ರವನ್ನು ದಿನ ೧ಕ್ಕೆ ೧೦೦೦ ಸಾರಿ ಜಪಿಸುವುದಲ್ಲದೆ ಏಕ ಭುಕ್ತಿಯಿಂದಿರಬೇಕು ಮತ್ತು ಆ ಅಖಂಡ ದೀಪವನ್ನಿಟ್ಟಿರುವ ಕೊಠಡಿಯಲ್ಲಿಯೇ ಮಲಗಿಕೊಳ್ಳಬೇಕು. ಆ ಕೊಠಡಿಯಲ್ಲಿ ಇತರರ್ಯಾರನ್ನೂ ಸೇರಿಸಬಾರದು. ಈ ರೀತಿಯಲ್ಲಿ ಹತ್ತು ದಿವಸಗಳು ಶ್ರದ್ಧಾಭಕ್ತಿ ನಿಯಮಾಚರಣೆಯಿಂದ ಇರಲು ಶ್ರೀ ದೇವಿಯು ಸ್ವಪ್ನದಲ್ಲಿ ಪ್ರತ್ಯಕ್ಷಳಾಗುವಳು. ಆಗ ಆಕೆಯನ್ನು ಭಯ ಭಕ್ತಿಗಳಿಂದ ನಮಸ್ಕರಿಸಿ ತಾನು ಸ್ಮರಿಸಿದಾಗ ಬಂದು ತನಗೆ ಸಹಾಯ ಮಾಡುವಂತೆ ಪ್ರಾರ್ಥನೆಮಾಡಿಕೊಂಡರೆ ಆ ಶಕ್ತಿ ದೇವಿಯ ಮಹಿಮೆಯಿಂದ ೧೧ ವರ್ಷಗಳವರೆಗೂ ತಾನು ಕೈಗೊಂಡ ಕಾರ್ಯಗಳೆಲ್ಲವೂ ಜಯಪ್ರದವಾಗುವುವು.

ಮಂತ್ರ :—ಓಂ ಅಸ್ಯ ಶ್ರೀ ದಕ್ಷಿಣಕಾಳಿಕಾ ಮಹಾಮಂತ್ರಸ್ಯ | ಭೈರವ ರುಷಿಃ | ಉಷ್ಣಿ ಕೀಛಂದಃ | ಮಹಾಕಾಳಿ ದೇವತಾ | ಕ್ರಾಂ | ಬೀಜಂ | ಕ್ರೀಂ | ಶಕ್ತಿಃ | ಕ್ರೂಂ | ಕೀಲಕಂ | ಮಮದಕ್ಷಿಣಕಾಳಿಕಾ ಪ್ರಸಾದ ಸಿಧ್ಯರ್ಥೆ ಜಪೆ ವಿನಿ ಯೋಗಃ || ಕ್ರಾಂ | ಅಂಗುಷ್ಟಾಭ್ಯಾಂ ನಮಃ | ಕ್ರೀಂ | ತರ್ಜನೀಭ್ಯಾಂ ನಮಃ | ಕ್ರೂಂ | ಮಧ್ಯಮಾಭ್ಯಾಂ ನಮಃ | ಕ್ರೈಂ | ಅನಾಮಿಕಾಭ್ಯಾಂ ನಮಃ | ಕ್ರೋಂ | ಕನಿಷ್ಠ ಕಾಭ್ಯಾಂನಮಃ | ಕ್ರಂ | ಕರತಲ ಕರಪೃಷ್ಠಾಭ್ಯಾಂ ನಮಃ || ಏವಂ ಹೃದ ಯಾದಿ ಷಡಾಂಗನ್ಯಾಸಃ || ಓಂ ಭೂರ್ಭುವಸ್ಸುವರೋಮಿತಿ ದಿಗ್ಬಂಧಃ ಧ್ಯಾನಂ ಚ ಕರಾಳವದನಾಂಘೋರಂ ಮುಕ್ತ ಕೇಶಿಂಚತುರ್ಭುಜಾಂ | ಕಾಳಿಕಾಂ ದಕ್ಷಿಣಾಂ ದಿವ್ಯಾಂ | ರುಂಡಮಾಲಾಂ ವಿಭೂಷಿತಾಂ ||

ಮೂಲ ಮಂತ್ರ :— ಓಂ ನಮೋ ಭಗವತಿ ಮುಖ ಕಮಲವಾಸಿನೀ | ತ್ರೈಲೋಕ್ಯಮೋಹಿನಿ | ಓಂ | ಕ್ರೀಂ | ಕ್ರೀಂ | ಹ್ರೂಂ | ಹ್ರೂಂ | ಹ್ರೀಂ | ಹ್ರೀಂ | ದಕ್ಷಿಣಕಾಳಿಕೆ | ಹ್ರೂಂ | ಹ್ರೂಂ | ಹ್ರೀಂ | ಹ್ರೀಂ | ಕ್ರೀಂ | ಕ್ರೀಂ I ಓಂ| ಫಟುಸ್ವಾಹಾ ||—ಇತಿ ದಕ್ಷಿಣ ಕಾಳಿಕಾ ಮಹಾಮಂತ್ರ ಯೋಗಃ

ಅಥ ಕಾಮೇಶ್ವರಿ ಮಹಾಮಂತ್ರ

ಮಂತ್ರ :—ಓಂ ನಮೋ ಭಗವತೇ ಕಾಮೇಶ್ವರೀ ಸ್ವಾಹಾ ||

ಭಾನುವಾರ ಅಥವಾ ಗುರುವಾರದ ದಿವಸ ಅಮಾಸಾಸ್ಯೆಯು ಬಂದಕಾಲದಲ್ಲಿ ಒಂದು ಭಂಗಾರದ ತಗಡಿನಲ್ಲಿ ಶ್ರೀ ಕಾಮೇಶ್ವರಿಯ ಪ್ರತಿಮೆಯನ್ನು ಬರೆದು ಸ್ನಾನ ಸಂಧ್ಯಾವಂದನಾದಿಗಳಿಂದ ಶುಚಿರ್ಭೂತನಾಗಿ, ಆ ಪ್ರತಿಮೆಯನ್ನು ಅಷ್ಟ ವಿಧಾರ್ಚನೆಯಿಂದ ಪೂಜಿಸಿ, ಮೇಲೆ ಬರೆದಿರುವ ಮಂತ್ರವನ್ನು ೧೦೮ ಸಾರಿ ಜಪಿಸಿ ಸಿದ್ಧಿಯಂ ಮಾಡಿಕೊಂಡು, ಕಾಮೇಶ್ವರಿ ಪ್ರತಿಮೆಯನ್ನು ಬರೆದಿರುವ ಭಂಗಾರದ ತಗಡನ್ನು ಬ್ರಾಹ್ಮಣಸಿಗೆ ದಾನಮಾಡಬೇಕು. ಬಳಿಕ ಸ್ನಾನಮಾಡಿ ಶುಚಿರ್ಭೂತ ನಾಗಿ ನಾಗಲೀಕನ ಗಡ್ಡೆಯನ್ನು ತಂದು ಅಷ್ಟವಿಧಾರ್ಚನೆಯಿಂದ ಪೂಜಿಸಿ ಮೇಲೆ ಹೇಳಿರುವ ಮಂತ್ರವನ್ನು ೨೧ ಸಾರಿ ಜಪಿಸಬೇಕು. ಅನಂತರ ಆ ಗಡ್ಡೆಯನ್ನು ಒಂದು ಬೆಳ್ಳಿಯ ತಾಯಿತದಲ್ಲಿ ಹಾಕಿ ಭದ್ರಪಡಿಸಿ ದೇಹದಲ್ಲಿ ಧರಿಸಿಕೊಳ್ಳಲು ದು ರ್ಜನರಾದಿಯಾಗಿ ಸರ್ವರೂ ಗೌರವಿಸುವರು; ಮತ್ತು ಹುಲಿ, ಕರಡಿ, ನರಿ, ತೋಳ ಮುಳ್ಳುಹಂದಿ ಮುಂತಾದ ಕ್ರೂರ ಶ್ವಾಪದಗಳಿಗೆ ಕಚ್ಚಲು ಬಾಯಿ ತಡೆಯುಂಟಾಗು ವುದು. ಇದು ಅನುಭವವುಳ್ಳದು. ಇತಿ ಕಾಮೇಶ್ವರಿ ಮಹಾ ಮಂತ್ರಯೋಗ.

ಅತ ಭುವನೇಶ್ವರಿ ಮಹಾ ಮಂತ್ರಯೋಗಃ

ಹಸ್ತಾನಕ್ಷತ್ರವಿದ್ದ ದಿವಸ ಸ್ನಾನ ಸಂಧ್ಯಾವಂದನಾದಿಗಳಿಂದ ಶುಚಿರ್ಭೂತ ನಾಗಿ ಕಾಡು ವ್ರಿಷ್ಟಿಗಿಡದ ಹತ್ತಿರಕ್ಕೆ ಹೋಗಿ ಆ ಗಿಡದ ಬುಡದಲ್ಲಿ ಭುವನೇಶ್ವರಿ ಪ್ರತಿಮೆಯನ್ನು ಬರೆದು, ಕೆಳಗಿನ ಮಂತ್ರದಿಂದ ಆವಾಹನೆಮಾಡಿ ಅಷ್ಟವಿಧಾರ್ಚನೆ ಯಿಂದ ಪೂಜಿಸಿ, ಸದರಿ ಗಿಡವನ್ನು ಸಮೂಲವಾಗಿ ತಂದು, ಅದರಲ್ಲಿ ಸ್ವಲ್ಪ ಬೇರಿ

ನ್ನು ತೆಗೆದುಕೊಂಡು ಕೆಂಪು, ಕಪ್ಪು, ಬಿಳುಪು ದಾರಗಳಿಂದ ಸುತ್ತಿ ಈ ಕೆಳಗೆ ಬರೆದಿರುವ ಮಂತ್ರದಿಂದ ೫ ಸಾರಿ ಮಂತ್ರಿಸಿ, ಅಷ್ಟಗಂಧವಂ ಪೂಸಿ ತಲೆಯಲ್ಲಿ ಮುಡಿಯಲು ರಾಜ ಚೋರ ಮೃಗಭಯಗಳುಂಟಾಗುವುದಿಲ್ಲ.

ಮಂತ್ರ:—ಓಂ ನಮೋ ಭಗವತಿ| ಲಲಿತಾಂಗ ಭೂಷಣಿ: ತ್ರಿಭುವನ ಕೀಲಕಿ| ಸರ್ವಜನ ಭಯಂಕರೀ| ಹ್ರಾಂ| ಹ್ರೀಂ| ಹ್ರೂಂ| ಹ್ರೈಂ| ಹ್ರೋಂ| ಹ್ರಃ| ನಮಃ|| ಇತಿ ಭುವನೇಶ್ವರಿ ಮಹಾ ಮಂತ್ರಯೋಗಃ

ಅಥ ಮಯೂರಶಿಖಿ ಮಹಾಮಂತ್ರಃ

ಮಂತ್ರ:—ಓಂ ನಮೋ ಪುಣ್ಯ ದೇಹಾಯ| ಸಸ್ಯಾಧಿಪತಯೇನಮಃ| ಮಯೂರ ಶಿಖಿನೇತುಭ್ಯಂ ನಮೋತಿಷ್ಟ ಪ್ರದಾಯತೇ|| ಈ ಮಹಾಮಂತವನ್ನು ಭಾನುವಾರ ಪುಷ್ಯನಕ್ಷತ್ರ ಬಂದ ದಿವಸವಾಗಲಿ ಗ್ರಹಣಕಾಲದಲ್ಲಾಗಲಿ ೧೬೦೦ ಸಾರಿ ಜಪಿಸಿ ಸಿದ್ಧಿಯಂ ಮಾಡಿಕೊಳ್ಳಬೇಕು. ಅನಂತರ ಭಾನುವಾರ ಪುಷ ನಕ್ಷತ್ರ ಬಂದ ದಿವಸ ಸ್ನಾನ ಸಂಧ್ಯಾವಂದನಾದಿಗಳಿಂದ ಶುಚಿರ್ಭೂತನಾಗಿ ಮಯೂರ ಶಿಖಿಯನ್ನು ತಂದು ಪೂಜೆಮಾಡಿ ಸದರಿ ಮಹಾಮಂತ್ರದಿಂದ ೯ ಸಾರಿ ಮಂತ್ರಿಸಿ ಮಕ್ಕಳ ತೊಟ್ಟಿಲಿಗಾಗಲಿ, ಕೊರಳಿಗಾಗಲಿ ಕಟ್ಟಿದರೆ ಮಕ್ಕಳಿಗುಂಟಾ ಗುವ ಬಾಲಾರಿಷ್ಟ, ದೃಷ್ಟಿದೋಷ, ಗ್ರಹಪೀಡೆ ಮುಂತಾದ ಸರ್ವ ಗ್ರಹಪೀಡೆಗಳು ನಿವಾರಣೆಯಾಗುವುವು. ಆ ಮಯೂರ ಶಿಖಿಯನ್ನು ಚೂರ್ಣಮಾಡಿ ದೂಪಹಾಕಿ ದರೆ ಜ್ವರ ಪರಿಹಾರವಾಗುವುದು. ಅದರ ಬೇರನ್ನು ಅಷ್ಟವಿಧಾರ್ಚನೆಯಿಂದ ಪೂಜಿಸಿ ಮನೆಯ ಮಧ್ಯದಲ್ಲಿ ಹೂಳಲು ಖಂಡಿತವಾಗಿಯೂ ಚೋರಭಯವುಂಟಾ ಗುವುದಿಲ್ಲ. ಆ ಬೇರನ್ನು ಸ್ತ್ರೀಯರ ಋತುಕಾಲದಲ್ಲಿ ಕೊಡಲು ಆ ಸ್ತ್ರೀಯರು ಗರ್ಭವಂ ಧರಿಸುವರು. ಮಯೂರ ಶಿಖಿಯ ಬೇರನ್ನು ಸ್ವಲ್ಪ ನೀರು ಹಾಕಿಕೊಂಡು ತೇದು ಆ ಗಂಧವನ್ನು ಹೊಕ್ಕಳಕ್ಕೂ ಶಿಶ್ನಕ್ಕೂ ಲೇಪಿಸಿಕೊಂಡರೆ ವೀರ್ಯಸ್ಥಂಭನ ವಾಗುವುನು ಆ ಬೇರನ್ನು ಸ್ವಲ್ಪ ಹಳೇ ನೀರಿನಲ್ಲಿ ತೇದು ಕುಡಿಸಿದರೂ ಅಥವಾ ಸ್ವಲ್ಪ ಮೂಗಿನಲ್ಲಿ ಹಾಕಿದರೂ ಸರ್ವ ವಿಷನಿವಾರಣೆಯಾಗುವುದು. ಮಯೂರ ಶಿಖಿಯ ಬೇರನ್ನು ಒಳ್ಳೆಣ್ಣೆಯಲ್ಲಿ ಕಲೆಸಿ ೩ ದಿವಸಗಳು ಸೇವಿಸಲು ವಾಯು ಶೂಲೆಯು ನಿವಾರಣೆಯಾಗುವುದು. ಇತಿ ಮಯೂರಶಿಖಿ ಮಹಾ ಮಂತ್ರಯೋಗಃ

ಅಥ ಭೈರವ ಮಹಾಮಂತ್ರ

ಓಂ ನಮೋ ಭವಗವತೇ| ಕ್ಷೇತ್ರ ಪಾಲಾಯನಮಃ ತ್ರಿಶೂಲ ಡಮರುಗ ಪಾಶೋಭಯ ಹಸ್ತಾಯ| ತ್ರಿಣೇತ್ರಾಯ| ಮಮಧ್ಯಾನಾಯ| ಚಿಂತಿತಂ ಕಾ ರ್ಯಸಿದ್ಧಿಂ ಕುರುಕುರು|| ಈ ಮಹಾಮಂತ್ರವನ್ನು ಪ್ರತಿದಿವಸವೂ ೧೦೮ ಸಾರಿ ಯಂತೆ ೨೧ ದಿವಸಗಳು ಜಪಿಸಿದರೆ ಸ್ವಪ್ನದಲ್ಲಿ ಭೈರವಮೂರ್ತಿಯು ದರ್ಶನವಾಗು ವುದು. ರೂಪುದೋರಿದಲ್ಲಿ ಸಿದ್ಧಿಯು, ಸರ್ವ ಕಾರ್ಯ ಜಯಪ್ರದವಾಗುವುದು.

ಸರ್ಪವಿಷ ಪರಿಹಾರಕ್ಕೆನೀರನ್ನ ಭಿಮಂತ್ರಿಸಿ ಕೊಡುವ ಮಂತ್ರ

ಮಂತ್ರ:—ಪ್ರತಿಗರುಡ। ಪಾತಾಳ ಗರುಡ, ಇಂದ್ರಗರುಡ ಚಂದ್ರ ಗರು
ಡ ಇಂದಾಂತನೀರಂ। ಚಂದ್ರಾಂತನೀರಂ । ವಿಷಂಪೀರಂ। ಹೋ-ಮ-ಯ-ಣ
ವಿಷಂನಾಸ್ತಿ। ವಿಷಂನಾಸ್ತಿ । ದಂತಂ । ನಿರ್ವಿಷಂ । ಓಂ । ಹ್ರಂ। ಗುರುಪ್ರಸಾದ
ಸ್ವಾಹಾ॥ ಒಂದು ನೀರು ತುಂಬಿದ ತಂಬಿಗೆಯಲ್ಲಿ, ತಾಮ್ರ, ಬೆಳ್ಳಿ, ಭಂಗಾರ
ಅಥವಾ ಇತರ ಯಾವ ಲೋಹದಿಂದಾದರೂ ಒಂದು ಗರುಡ ಪ್ರತಿಮೆಯನ್ನು
ಮಾಡಿಸಿ ಹಾಕಿ, ಆ ತಂಬಿಗೆಯನ್ನು ಅಷ್ಟ ವಿಧಾರ್ಚನೆಯಿಂದ ಪೂಜಿಸಿ, ಮೇಲಿನ
ಮಂತ್ರವನ್ನು ೧೦೮ ಸಾರಿ ಪಠನೆಮಾಡುತ್ತಾ ೧೦೮ ಕೆಂಪು ಕಣಗಿಲು ಹೂವುಗ
ಳಿಂದ ಪೂಜಿಸಿ ಆ ನೀರನ್ನು ಕಣಗಿಲು ಗಿಡದ ಮೇಲೆ ಚೆಲ್ಲುವುದು. ಸರ್ಪ ಕಚ್ಚಿ
ದವರು ಬಂದರೆ ಸ್ವಲ್ಪ ನೀರನ್ನು ಮೇಲಿನ ಮಂತ್ರದಿಂದ ೧೧ ಸಾರಿ ಅಭಿಮಂತ್ರಿಸಿ
ಕುಡಿಸಲು ಸರ್ಪ ಕಚ್ಚಿದ ವಿಷವು ಪರಿಹಾರವಾಗುವುದು.

ಅಥ ನವನಾಗ ಕವಚ

ಅನಂತಂ ವಾಸುಕಿಂಶೇಷ । ಪದ್ಮಕರ್ಕೋಟಕಂಬಲಂ॥
ಶಂಖಫಾಲಂ ಧಾರ್ತರಾರಾಷ್ಟ್ರಂ । ಕಾಲಯಂತಕ್ಷಕಂ ತಥಾ॥
ಏತಾನಿ ನವನಾಮಾನಿ । ನಾಗಾನಾಂಚ ಮಹಾತ್ಮನಾಂ॥
ಸಾಯಿಂಕಾಲೇ ಪಠೇನಿತ್ಯಂ। ಪ್ರಾತಃಕಾಲೇ ವಿಶೇಷತಃ॥
ತತಸ್ಸೋರ್ವಿಷಭಯಂ ನಾಸ್ತಿ । ಸರ್ವತ್ರ ವಿಜಯಾಭವೇತ್॥

ಮನೆಯಲ್ಲಿ ಸರ್ಪ ಭಯವುಂಟಾದ ಸಮಯದಲ್ಲಿ ಈ ನವನಾಗಕವಚವನ್ನು ಪ್ರತಿ ದಿವಸ ಬೆಳಿಗ್ಗೆ ಸಾಯಂಕಾಲ ಸ್ನಾನ ಮಾಡಿಕೊಂಡು ದೇವರನ್ನು ಪೂಜಿಸಿ ೨೧ ದಿನಸ ಪಠಿಸಿ ಮನೆಯಲ್ಲಿ ಗೋಡೆ ತೊಲೆಗಳು ಬಾಗಿಲು ಇವುಗಳ ಮೇಲೂ (ಆಸ್ತಿಕ) ಎಂಬ ೩ ಪ್ರಣವ ಅಕ್ಷರಗಳನ್ನು ಬರೆಯಬೇಕು ಅಂದರೆ ಸರ್ಪ ವಿಷಭಯ ನಿವಾರಣೆ ಆಗುವದಲ್ಲದೆ ಆ ಮನೆಗೆ ಸರ್ಪಗಳ ಪ್ರವೇಶದ ಭಯವೇ ಇರುವುದಿಲ್ಲ.

ಭೂಮಿಯಲ್ಲಿರುವ ನಿಧಿನಿಕ್ಷೇಪ ಸಿದ್ಧ ಮಂತ್ರ

ಒಂದು ಶುಭ ದಿವಸ ಶುಭಮುಹೂರ್ತದಲ್ಲಿ ಸ್ನಾನ ಸಂಧ್ಯಾವಂದನಾದಿಗಳಿಂದ ಶುಚಿರ್ಭೂತನಾಗಿ ಒಂದು ಕೋಣೆಯಲ್ಲಿ ನೆಲಸಾರಣೆಯಂ ಮಾಡಿ ರಂಗವಲ್ಲಿಯನ್ನಿಟ್ಟು ಪೂರ್ವದಿಙ್ಮುಖ ನಾಗೆ ಕುಳಿತುಕೊಂಡು, ವಿಘ್ನೇಶ್ವರ ಪೂಜೆಯನ್ನು ಮಾಡಿ ಈ ಕೆಳಗಿನ ಮಂತ್ರವನ್ನು ೧೦೮ ಸಾರಿ ಜಪಿಸುತ್ತಾ ೧೦೧ ಮಲ್ಲಿಗೆ ಹೂವುಗಳಿಂದ ಪೂಜಿಸಲು ಮಂತ್ರವು ಸಿದ್ಧಿಸುವುದು. ಅನಂತರ ಬಾಗೇ ಮರದ ಎಲೆ, ಹೂವು, ಕಾಯಿ, ಬೀಜ, ಬೇರು, ಶೂದ್ರನಾಭಿ, ದತ್ತೂರಿಬೀಜ, ಚಿಕ್ಕ ಕಣಗಿಲು ಗಿಡದ ಎಲೆ, ಹೂವು, ಕಾಯಿ, ಬೀಜ, ಬೇರು ಇವುಗಳನ್ನೆಲ್ಲಾ ಒಟ್ಟಿಗೆ ಕೂಡಿಸಿ ಕುಟ್ಟಿ ಚೂರ್ಣಮಾಡಿ ಸಾಸಿವೆ ಯೆಣ್ಣೆಯಲ್ಲಿ ಕಲಸಿ ಇಟ್ಟುಕೊಳ್ಳಬೇಕು. ಭೂಮಿಯಲ್ಲಿ ಯಾವ ಸ್ಥಳದಲ್ಲಿ ನಿಧಿನಿಕ್ಷೇಪಗಳಿರುವುದೆಂದು ತಿಳಿದು ಬರುವುದೋ ಆ ಸ್ಥಳ

ದಲ್ಲಿ ಈ ಧೂಪದ ಹೊಗೆಯನ್ನು ಹಾಕಿ, ಸಿದ್ಧಿಮಾಡಿಕೊಂಡಿರುವ ಮಂತ್ರವನ್ನು ೯ ಸಾರಿ ಪಠಿಸಲು ನಿಧಿ ಸ್ಥಾನದಲ್ಲಿರುವ ಸರ್ವ ಗ್ರಹಗಳೂ ತೊಲಗಿ ಹೋಗುವುವು. ಆಗ ಆ ಸ್ಥಳವನ್ನಗೆದು ನಿಧಿಯನ್ನು ಸ್ವೀಕರಿಸಿ ಸುಖವನ್ನು ಬಿಡೆಯುವುದು.

ಮಂತ್ರ:—ಓಂ ನಮೋ ಭಗವತೇ । ವಿಘ್ನವಿನಾಶಾಯ । ನಿಧಿಗ್ರಹಣಂ । ಕುರುಕುರು ಸ್ವಾಹಾ:॥

ಅಥ ಮೋಹಿನಿ ಮಂತ್ರಃ— ಓಂ ನಮೋ ಮೋಹಿನಿ । ಸಂಗ್ರಾಮಹಂಕಾಳಿ। ಠಕ್ಕಿನಾ ವಿದ್ಯನಾಯಕೀ । ಸರ್ವ ಮೋಹಿನೀ । ಯಕಿವುದೆನಾ ಅಡಿತ್ತುಯಂದೆನ್ನ ವಶಮಾಗಯ ನಿರ್ಕಸ್ವಾಹಾ ॥

ಈ ಮಂತ್ರವನ್ನು ವಿಭೂತಿಯ ಮೇಲೆ ಬರೆದು ಆ ವಿಭೂತಿಯನ್ನು ಕೈಗಳಲ್ಲಿ ಹಿಡಿದುಕೊಂಡು ೧೦೧ ಸಾರಿ ಮಂತ್ರವನ್ನು ಜಪಿಸಲು ಮೋಹಿನೀ ಗ್ರಹವು ಸಾಧ್ವೀನವಾಗುವುದು. ಈ ಮಂತ್ರವನ್ನು ಪ್ರತಿದಿವಸವೂ ಸಾಧನೆ ಮಾಡುವುದರಿಂದ, ರಾತ್ರಿ ನಿದ್ದೆ ಮಾಡುವ ಕಾಲದಲ್ಲಿ ಉಂಟಾಗುವ ಸ್ವಪ್ನೇಂದ್ರಿಯ ಸ್ಖಲನ, ಸ್ವಪ್ನದಲ್ಲಿ ಸ್ತ್ರಿ ಸಂಭೋಗ ಮಾಡಿದಂತಾಗಿ ಧಾತು ನಷ್ಟವಾಗುವಿಕೆ ಇತ್ಯಾಧಿಗಳು ನಿಲ್ಲುತ್ತವೆ. ಆದರೆ ದಿವಾರಾತ್ರಿಯೂ ಸ್ತ್ರೀ ಚಿಂತನೆಯಿಂದಾಗಲಿ, ರೋಗದ ದುರ್ಬಲತೆಯಿಂದಾಗಲಿ ಉಂಟಾಗುವ ಧಾತು ನಷ್ಟತೆಗೆ ಈ ಮಂತ್ರ ಯೋಗವು ಉಪಯೋಗ ಬೀಳುವುದಿಲ್ಲ. ಪ್ರತಿ ರಾತ್ರಿಯೂ ಈ ಮಂತ್ರವನ್ನು ೧೦೧ ಸಾರಿ ಮಂತ್ರಿಸಿ ವಿಭೂತಿಯನ್ನು ಹಣೆಗಿಟ್ಟುಕೊಂಡು ನಿದ್ದೆಮಾಡುವುದರಿಂದ ಸುಖನಿದ್ರೆಯು ಲಭಿಸುವುದಲ್ಲದೆ ಆರೋಗ್ಯ ದೃಢಕಾಯರಾಗುವರು.

ಅಥ ಕನಸಿನ ಮಂತ್ರ

ಮಂತ್ರ:— ಓಂ ಮಸ್ತಮ । ಭಯಸ್ತಮಂ । ಭಯ । ವಯ। ನಮಸ್ತೆ॥

ಅಮಾವಾಸ್ಯೆ ಹುಣ್ಣಿಮೆಗಳಲ್ಲಿ ಒಂದು ಹರಿದ್ರಾ ಗಣಪತಿಯನ್ನು ಮಾಡಿ ಅದನ್ನ ನವಧಾನ್ಯದ ಮೇಲಿಟ್ಟು, ಸ್ನಾನ ಸಂಧ್ಯಾವಂದನಾದಿಗಳಿಂದ ಶುಚಿರ್ಭೂತನಾಗಿ, ಷೋಡಶೋಪಚಾರದಿಂದ ೧೦೮ ತುಂಬೇ ಹೂಗಳಿಂದ ಪೂಜಿಯತ್ತಾ ಪೂರ್ವ ದಿಙ್ಮುಖನಾಗಿ ಕುಳಿತುಕೊಂಡು ೧೦೮ ಸಾರಿ ಮೇಲಿನ ಮಂತ್ರವನ್ನು ಜಪಿಸಬೇಕು. ಅದೇ ಸಮಯದಲ್ಲಿ ಒಂದು ವಿಭೂತಿ ಘಟ್ಟಿಯನ್ನು ಸಹ ಮೇಲಿನ ಯಂತ್ರದಿಂದ ೧೦೮ ಸಾರಿ ಮಂತ್ರಿಸಿ ಇಟ್ಟುಕೊಳ್ಳಬೇಕು. ಬಳಿಕ ಆ ವಿಭೂತಿ ಘಟ್ಟಿಯನ್ನು ಪ್ರತಿದಿವಸ ಪ್ರಾತಃಕಾಲ ಸಾಯಂಕಾಲಗಳಲ್ಲಿ ೫೪ ಸಾರಿಯಂತೆ ಜಪಿಸಿ ವಿಭೂತಿಯನ್ನು ಹಣೆಯಲ್ಲಿ ಧರಿಸಿಕೊಳ್ಳುವುದು. ಪೂಜೆಯಾದನಂತರ ಆ ಗಣಪತಿಯನ್ನು ಒಂದು ಭರಣಿಯಲ್ಲಿ ಇಟ್ಟು ಮುಚ್ಚಳವನ್ನು ಮುಚ್ಚಿ ದೇವರ ಜಗುಲಿಯ ಮೇಲಿಟ್ಟು ಪ್ರತಿದಿವಸವೂ ಪೂಜಿಸುತ್ತಿರಬೇಕು. ಅನಂತರ ಹದಿನೈದು ದಿವಸಗಳ ಮೇಲೆ ಬರುವ ಮತ್ತೊಂದು ಅಮಾವಾಸ್ಯೆ ಅಥವಾ ಹುಣ್ಣಿಮೆಗಳಲ್ಲಿ ಪುನಃ ಮೇಲಿನಂತೆಯೇ ಆಚರಿಸುವುದು. ಹೀಗೆ ೩ ಅಮಾವಾಸ್ಯೆ ಅಥವಾ ೩ ಹುಣ್ಣಿಮೆ

ಗಳಲ್ಲಿ ಮೇಲೆ ಹೇಳಿರುವಂತೆ ಆಚರಿಸಿ ಆ ಮೂರು ಗಣಪತಿಗಳನ್ನು ಒಟ್ಟಿಗೆ ಒಂದು ಭರಣಿಯಲ್ಲಿಟ್ಟು ದೇವರ ಜಗುಲಿಯ ಮೇಲಿಡಬೇಕು. ನವಧಾನ್ಯವನ್ನೂ ಪೂಜೆಯ ಹೂವು ಮುಂತಾದ ನಿರ್ಮಾಲವನ್ನೂ ನೀರಿಗೆ ಹಾಕುವುದು ತರುವಾಯ ಆ ಭರಣಿಯ ಮುಚ್ಚಳವನ್ನು ತೆರೆಯದೆ ೯ ತಿಂಗಳು ಪ್ರತಿ ದಿನಸವೂ ತಪ್ಪದೆ ಪೂಜಿಸುತ್ತಿರಬೇಕು ಹೀಗೆ ಪೂಜಿಸುತ್ತಿರಲು ಕೈಗೊಂಡ ಕಾರ್ಯಗಳೆಲ್ಲವೂ ಸಿದ್ಧಿಸುವುವು. ರಾತ್ರಿ ಮಲಗುವ ಕಾಲದಲ್ಲಿ ಈ ಮಂತ್ರವನ್ನು ೧೧ ಸಾರಿ ಜಪಿಸಿ ಮಲಗಿಕೊಳ್ಳಲು ಸ್ವಪ್ನವುಂಟಾಗುವುದಿಲ್ಲ. ಮಕ್ಕಳ ಗ್ರಹದೋಷಕ್ಕೆ ನೂಲಿನ ಎಳೆಯನ್ನಾಗಲಿ ವಿಭೂತಿಯನ್ನಾಗಲಿ ಈ ಮಂತ್ರದಿಂದ ೧೧ ಬಾರಿ ಮಂತ್ರಿಸಿ ಉಪಯೋಗಿಸಲು ಮಕ್ಕಳ ಗ್ರಹದೋಷ ಪರಿಹಾರವಾಗುವುದು. ಎಣ್ಣೆಯನ್ನು ಈ ಮಂತ್ರದಿಂದ ೧೧ ಸಾರಿ ಮಂತ್ರಿಸಿ ಗರ್ಭಿಣಿಯರಿಗೆ ಕೊಡಲು ಸುಖಪ್ರಸವವಾಗುವುದು. ಉಪ್ಪು, ನೀರು ಮೊದಲಾದುವುಗಳನ್ನು ಈ ಮಂತ್ರದಿಂದ ೧೧ ಸಾರಿ ಮಂತ್ರಿಸಿ ಸೇವಿಸುವಂತೆ ಕೊಡಲು ಭೋಜನ ಸಮಯದಲ್ಲುಂಟಾಗುವ ದೃಷ್ಟಿದೋಷ ಪರಿಹಾರವಾಗುವುದು.

ಶೂಲಿನೀ ಮಂತ್ರ ಜಪ

ಮಂತ್ರ:— ಓಂ ಅಸ್ಯಶ್ರೀ ಶೂಲಿನೀ ದುರ್ಗಾ ಪರಮೇಶ್ವರೀ ಮಹಾಮಂತ್ರಸ್ಯ ದೀರ್ಘತಮ ಋಷಿಃ । ಕುಕುಪ್ಛಂದಃ ॥ ಶ್ರೀ ಶೂಲಿನೀ ದುರ್ಗಾ ಪರಮೇಶ್ವರಿ ದೇವತಾ । ಓಂ ಬಿಭ್ರಾಣ ಶೂಲ ಬಾಣಾಶರಿ ಸದರಗದಾ । ಚಾಪ ಪಾಶಾ ಕರಾಬ್ಜಾಂ । ಮೇಘಶ್ಯಾಮ ಕಿರೀಟೋಲಿಖಿತಾಃ । ಜಲಧರ ಭೀಷಣ ಭೂಷಣಾಢ್ಯಾಂ । ಸಿಂಹಸ್ಕಂಧಾದಿರೂಢ ಚತಸೃಭಿಃ । ರಸಿಟೇಟ ಸಿತಾಭಿಃ । ಪರಿಯಿತಾ । ಕನ್ಯಬಿರ್ಭಿನ್ನದೈತ್ಯಾ । ಭವತು ಭವಭಯಧ್ವಂಶಿನೀ ಶೂಲಿನೀನಾ । ಓಂ । ಹ್ರೀ । ಜ್ವಲಜ್ವಲ ಶೂಲಿನಿ । ಸರ್ವ ದುಷ್ಟ ಗ್ರಹ । ಹುಂ ಫಟುಸ್ವಾಹಾ ॥

ತಾಮ್ರ, ಬೆಳ್ಳಿ ಅಥವಾ ಬಂಗಾರದ ಒಂದು ಶಕ್ತಿ ಪ್ರತಿಮೆಯನ್ನು ಮಾಡಿಸಿಟ್ಟುಕೊಂಡು ಆದಿತ್ಯವಾರ, ಗುರುವಾರ ಅಮಾವಾಸ್ಯೆಯು ಬಂದ ಕಾಲದಲ್ಲಾಗಲಿ ಸೂರ್ಯ ಚಂದ್ರ ಗ್ರಹಣಕಾಲದಲ್ಲಾಗಲಿ ಸ್ನಾನ ಸಂಧ್ಯಾವಂದನಾದಿಗಳಿಂದ ಶುಚಿರ್ಭೂತನಾಗಿ, ದೇವರಕೋಣೆಯಲ್ಲಿ ನೆಲಸಾರಣೆಯನ್ನು ಮಾಡಿ ರಂಗವಲ್ಲಿಯನ್ನಿಟ್ಟು ಒಂದು ಮಣೆಯ ಮೇಲೆ ಶಕ್ತಿ ಪ್ರತಿಮೆಯನ್ನಿಟ್ಟು ಮೇಲಿನ ಮಂತ್ರವನ್ನು ೧೦೮ ಸಾರಿ ಪಠನ ಮಾಡುತ್ತಾ ೧೦೮ ಮಲ್ಲಿಗೆ, ಕಣಗಿಲು ಹೂಗಳಿಂದ, ಅಷ್ಟವಿಧಾರ್ಚನೆಯಿಂದ ಪೂಜಿಸಿ, ನೈವೇದ್ಯವನ್ನು ಸಮರ್ಪಿಸಬೇಕು. ಅನಂತರ ಆ ನೈವೇದ್ಯವನ್ನು ಗೋವಿಗೆ ಆಹಾರವಾಗಿ ಕೊಟ್ಟು, ಗೋವಿಗೆ ನಮಸ್ಕರಿಸಲು ಮಂತ್ರಸಿದ್ಧಿಯಾಗುವುದು. ಬಳಿಕ ಪ್ರತಿ ದಿವಸ ಪ್ರಾತಸ್ಸಂಧ್ಯಾಕಾಲಗಳಲ್ಲಿ ಪ್ರತಿ ವೇಳೆಯಲ್ಲಿಯೂ ಮಂತ್ರವನ್ನು ೯ ಸಾರಿ ಜಪಿಸಿ ಕುಂಕುಮವನ್ನು ಹಣೆಗಿಟ್ಟುಕೊಂಡು ಯಾವ ಕಾರ್ಯಾರಂಭ ಮಾಡಿದರೂ ಆ ಕಾರ್ಯವು ಶೀಘ್ರದಲ್ಲಿಯೇ ಜಯಪ್ರದವಾಗುವುದು.

ಸರ್ವ ವಿಧ ಬಾಲಗ್ರಹಹರ ಮಂತ್ರ

ಮಂತ್ರ —ಓಂ ನಮೋ ನಾರಸಿಂಹಾಯ। ಜ್ವಾಲಾಗ್ನಿ ನೇತ್ರಾಯ। ದೀರ್ಘದಂಷ್ಟ್ರಾಯ। ಶಂಖಚಕ್ರ ಗಧಾಧರಾಯ। ಹಿರಣ್ಯಕಶ್ಯಪ ಹೃದಯಾಂತ್ರ ಮಾಲಾವಿಭೂಷಿತಾಯ। ಹನ। ಹನ। ರುಚಿ ರುಚಿ। ಛಂಡ। ಛಂಡ। ಪ್ರಚಂಡ। ಪ್ರಚಂಡ। ಆಘೋರ। ಆಘೋರ। ತೀಘ್ರಂ। ನಿವಾರಯ। ನಿವಾರಯ। ಹುಂ। ಫಟುಸ್ವಾಹಾ॥

ತಾಮ್ರ, ಬೆಳ್ಳಿ, ಅಥವಾ ಭಂಗಾರದ ನೃಸಿಂಹ ಪ್ರತಿಮೆಯನ್ನು ಮಾಡಿಸಿಟ್ಟುಕೊಂಡು ಶನಿವಾರ ಅಮಾವಾಸ್ಯೆಯಾಗಲಿ, ಹುಣ್ಣಿಮೆಯಾಗಲಿ ಬಂದ ಕಾಲದಲ್ಲಿ ಸ್ನಾನ ಸಂಧ್ಯಾವಂದನಾದಿಗಳಿಂದ ಶುಚಿರ್ಭೂತನಾಗಿ, ಪರಿಶುದ್ಧ ಮನಸ್ಸುಳ್ಳವನಾಗಿ, ೧೦೮ ಕಣಗಿಲು ಹೂವುಗಳಿಂದ ೧೦೮ ಸಾರಿ ಮೇಲಿನ ಮಂತ್ರವನ್ನು ಪಠಿಸುತ್ತಾ, ಷೋಡಶೋಪಚಾರಗಳಿಂದ ಆ ನರಸಿಂಹ ಪ್ರತಿಮೆಯನ್ನು ಪೂಜಿಸಬೇಕು. ಅನಂತರ ಆ ಪ್ರತಿಮೆಯನ್ನು ದೇವರ ಸನ್ನಿಧಿಯಲ್ಲಿಟ್ಟು ಪ್ರತಿ ದಿನಸವೂ ಪೂಜಿಸುತ್ತಿರಬೇಕು. ಸ್ವಲ್ಪ ವಿಭೂತಿಯನ್ನಾಗಲಿ, ಬೂದಿಯನ್ನಾಗಲಿ ಕೈಯಲ್ಲಿ ತೆಗೆದುಕೊಂಡು ಮೇಲಿನ ಮಂತ್ರದಿಂದ ೧೧ ಬಾರಿ ಮಂತ್ರಿಸಿ ಬಾಲಗ್ರಹ ಪೀಡಿತರಾದ ಮಕ್ಕಳ ಮುಖಕ್ಕೆ ಸವರಿ, ಹಣೆಯಲ್ಲಿ ಸ್ವಲ್ಪ ಇಟ್ಟು, ಹೊಟ್ಟೆಗೆ ಸೇವಿಸಲು ಸ್ವಲ್ಪ ಕೊಟ್ಟು, ನೀರನ್ನು ಮೇಲಿನಂತೆಯೇ ಮಂತ್ರಿಸಿ ಮುಖಕ್ಕೆ ಹಾಕಲು ಸರ್ವವಿಧ ಬಾಲಗ್ರಹ ಪೀಡೆಯು ಪರಿಹಾರವಾಗುವುದು.

ಅಥ ಆದಿ ಗಣಪತಿ ಮಂತ್ರ

ಬೆಳಿಗ್ಗೆ ನಿತ್ಯಕರ್ಮಗಳನ್ನು ತೀರಿಸಿಕೊಂಡು ಸ್ನಾನವನ್ನು ಮಾಡಿ ಶುಚಿರ್ಭೂತನಾಗಿ ಒಂದು ಏಕಾಂತ ಕೋಣೆಯಲ್ಲಿ ಗೋಮಯದಿಂದ ಸಾರಿಸಿ ಶುಕ್ಲಪಕ್ಷದಲ್ಲಿ ಸೋಮವಾರ ದಿವಸವೂ, ಅಮಾವಾಸ್ಯೆಯ ದಿವಸ ಸೋಮವಾರ ದಿವಸವೂ ಪೂಜಾಸಾಮಾಗ್ರಿಗಳನ್ನು ಸಿದ್ಧಪಡಿಸಿಕೊಂಡು ರಂಗವಲ್ಲಿಯನ್ನಿಟ್ಟು ಗಣಪತಿ ಪ್ರತಿಮೆಯನ್ನು ಸದರಿ ರಂಗವಲ್ಲಿಯ ಮಧ್ಯದಲ್ಲಿಟ್ಟು ತಾನು ಉತ್ತರ ಮುಖವಾಗಿ ಆಸನದಮೇಲೆ ಕುಳಿತುಕೊಂಡು ಪ್ರತಿಮೆಯನ್ನು ಅಷ್ಟವಿಧಾರ್ಚನೆಯಿಂದ ಪೂಜಿಸಿ ರುದ್ರಾಕ್ಷಿ ಮಾಲೆಯನ್ನು ಹಿಡಿದುಕೊಂಡು "ಶಿವ, ಶಿವಾ, ಓಂ, ರೀಜ್, ಅರ್ಜ್" ಎಂಬ ಮಂತ್ರವನ್ನು ೧೦೮ ಸಾರಿ ಜಪಿಸಬೇಕು. ಹೀಗೆ ೪೫ ದಿವಸ ಜಪಿಸಿದರೆ ಸರ್ವ ಕಾರ್ಯ ಸಿದ್ಧಿಯು, ಭೂತ ಪಿಶಾಚಿಗಳು, ದೇವತೆಗಳು, ಮೃಗ ಪಕ್ಷಿಗಳು ಸಹ ವಶವಾಗುವವು.

ಅಥ ಮಹಾ ಗಣಪತಿ ಮಂತ್ರ

ಮೇಲೆ ಹೇಳಿದಂತೆ ಕೋಣೆಯನ್ನು ಸಿದ್ಧಪಡಿಸಿಕೊಂಡು ಶುಚಿರ್ಭೂತನಾಗಿ ಪೂರ್ವಕ್ಕೆ ಮುಖನಾಗಿ ಕುಳಿತುಕೊಂಡು ವಿಭೂತಿ ಧಾರಣಮಾಡಿ ತುಲಸೀಮಾಲೆಯನ್ನು ಹಸ್ತದಲ್ಲಿ ಹಿಡಿದು "ಓಂ ಕ್ಲೀಂ, ಶಿಜ್" ಎಂಬ ಮಂತ್ರವನ್ನು ೧೦೮ ಸಾರಿ ಜಪಿಸಬೇಕು. ಹೀಗೆ ೪೫ ದಿವಸ ಆಚರಿಸಬೇಕು. ಇದರಿಂದ ಸಕಲ ವ್ಯಾಧಿಗಳು

ವಿಷ ಪಿಶಾಚಿಗಳಿಂದ ನಿವಾರಣೆಯನ್ನು ಹೊಂದುವದಲ್ಲದೆ ಗ್ರಹಗಳು ವಶವಾಗುವವು.

